ಒಂದರಷ್ಟು ಕಳೆದ ಸಾರಿಗಿಂತ ಹೆಚ್ಚು ಮತ ತೆಗೆದುಕೊಂಡು ಭಂದು, ಚುನಾವಣೆಯಲ್ಲಿ ಗೆದ್ದುಬಂದಿದ್ದೇವೆಂದು ಹೇಳಿ ಜನರಿಗೆ ಜಿಲ್ಲಾಪರಿಷತ್ ಮಸೂದೆಯನ್ನು ಇಲ್ಲಿ ಅಮೆಂಡ್‌ಮೆಂಟ್ ಮಾಡುತ್ತೇವೆಂದು ಹೇಳಿದೆ, ಮೋಸ ಮಾಡತಕ್ಕಂಥ ಈ ಪ್ರವೃತ್ತಿ ಏನು ಇದೆ ಇದನ್ನು ನಾನು ಪ್ರತಿಭಟಿಸುತ್ತಿದ್ದೇನೆ. ಮಾನ್ಯ ಅಧ್ಯಕ್ಷರೆ ನಾನು ಅದರ ವಿವರಕ್ಕೆ ಈಗ ಹೋಗುವುದಿಲ್ಲ. ಏತಕ್ಕೆಂದರೆ 64ನೇ ಶಾಸನ, ಆ ತಿದ್ದುಪಡಿ ಮಸೂದೆ ಯಾರು ತಂದವರು; ಏತಕ್ಕೆ ತಂದರು, ಅದರಲ್ಲಿ ಏನು ಅಂಶಗಳು ಒಳಪಟ್ಟಿತ್ತು, ಚನಾವಣೆಯ ಕಾಲದಲ್ಲಿ ಕಾಂಗ್ರೆಸ್‌ನ ಪ್ರಮುಖರು ಇಲ್ಲಿ ಬಂದು ಭಾಷಣ ಮಾಡಿದಾಗ ಈ ವಿಚಾರದಲ್ಲಿ ಏನು ಹೇಳಿದ್ದಾರೆ, ಅದೆಲ್ಲ ಮಾಹಿತಿಗಳನ್ನು ಸಂಗ್ರಹಿಸಿಟ್ಟಿದ್ದೇನೆ. ಮುಂದೆ ವಿವರವಾಗಿ ಹೇಳುತ್ತೇನೆ. ಆದರೆ ತತ್‌ಕ್ಷಣ ಇರತಕ್ಕಂಥ ಈ ಒಂದು ತಿದ್ದುಪಡಿಯನ್ನು ಹಿಂದಿನ ಕಾಂಗ್ರೆಸ್ ಸರ್ಕಾರ ರಾಜ್ಯಾಂಗದ 64ನೇ ವಿಧಿಯನ್ನು ಅಮೆಂಡ್ ಮಾಡುವುದಕ್ಕಾಗಿ ತಂದಂಥ ಶಾಸನಕ್ಕೆ ಅನುಗುಣವಾಗಿದೆಯೇ? ಆ ಕಾರಣದಿಂದ ಈ ಮಸೂದೆಯನ್ನು ಈ ಸಂದರ್ಭದಲ್ಲಿ ಮಂಡನೆ ಮಾಡುವುದಕ್ಕೆ ತಾವು ಅನುಮತಿ ಕೊಡಕೂಡದು ಎಂದು ಕೇಳಿಕೊಳ್ಳುತ್ತೇನೆ. ನಮ್ಮನ್ನು ಅವರು ಇಷ್ಟೊಂದು ಲಘುವಾಗಿ ತೆಗೆದುಕೊಳ್ಳತಕ್ಕದ್ದು ಸಲ್ಲದು. ಜನತಂತ್ರ ಶಾಶ್ವತವಾಗಿರಬೇಕು. ಅವರಲ್ಲಿ ಸಂಖ್ಯೆ ಇರಬಹುದು, ಅದು ಶಾಶ್ವತ ಅಲ್ಲ. ರಾಜಕೀಯ ವ್ಯವಸ್ಥೆ ದಿನೇದಿನೇ ಹದಗೆಡುತ್ತಿದೆ. ನಿಮ್ಮ ಅಭಿಪ್ರಾಯವನ್ನು ಸಂಗ್ರಹಿಸುವಾಗ ನೀವು ಕೊಟ್ಟ ಮಾತೇನು? ಪ್ರತಿ ಪಕ್ಷದ ಮುಖಂಡರನ್ನು ಕರೆದು ಎಷ್ಟು ಸ್ವಾಮ್ಯ ಬರುತ್ತದೋ ಅಷ್ಟನ್ನು ಪೂರೈಸೋಣ, ಉಳಿದದ್ದನ್ನು ಶಾಸನ ಸಭೆಯಲ್ಲಿ ಚರ್ಚೆಸೋಣ ಎಂಬ ಮಾತನ್ನು ನೀವೂ ಹೇಳಿದ್ದಿರಿ, ನಿಮ್ಮ ಹಿಂದಿನ ಮಂತ್ರಿಗಳು ಹೇಳಿದ್ದರು. ಬೇಸಿಕ್ ಇಷ್ಯೂವನ್ನು ತೆಗೆದು ರಾಜ್ಯಾಂಗದತ್ತವಾಗಿ ಶಾಸನಸಭೆಗೆ ಅಧಿಕಾರವನ್ನು ವರ್ಗಾಯಿಸತಕ್ಕ ಅಧಿಕಾರವೇ ಇಲ್ಲವೆಂದು ಹೇಳಿದಿರಿ. ನಾನು ಅದಕ್ಕೆ ಹೋಗುವುದಿಲ್ಲ. ಇಲ್ಲಿ ಈ ಶಾಸನಸಭೆಯಲ್ಲಿ ಮಸೂದೆಯನ್ನು ಮಂಡನೆ ಮಾಡಿ ನಂತರ ಅದು ರಾಜ್ಯಪಾಲರಿಗೆ ಹೋಗಿ, ಕೇಂದ್ರ ಸರ್ಕಾರಕ್ಕೆ ಹೋಗಿ ಕೇಂದ್ರ ಸರ್ಕಾರದ ಕಾನೂನು ಪಂಡಿತರೆಲ್ಲಾ ತಮ್ಮ ವ್ಯಾಖ್ಯಾನ ಮಾಡಿ ರಾಷ್ಟ್ರಾಧ್ಯಕ್ಷರ ಒಪ್ಪಿಗೆ ಪಡೆದಂತಹ ಮಸೂದೆ ರಾಜ್ಯಾಂಗಬದ್ಧವಾಗಿ ಇಲ್ಲವೆಂದು ಹೇಳುವುದಾದರೆ, ಇವರೆಲ್ಲರಿಗಿಂತ ತಾವು ಬುದ್ಧಿವಂತರು ಎಂದರೆ ನಾನು ಅದನ್ನು ಪ್ರಶ್ನೆ ಮಾಡುವುದಿಲ್ಲ. ಆದರೆ, ಇಷ್ಟೊಂದು ಅವಸರವಾಗಿ ಮಸೂದೆಯನ್ನು ತರತಕ್ಕದ್ದು ಯೋಗ್ಯ ಅಲ್ಲ. ಇಡೀ ದೇಶದಲ್ಲಿ 55 ಸಾವಿರ ಜನ ಚುನಾಯಿತ ಪ್ರತಿನಿಧಿಗಳಿದ್ದಾರೆ. ನಮ್ಮದು ಇದು ಒಂದೇ ಸಭೆಯಲ್ಲ. 224 ಜನರು ಕುಳಿತು ತೀರ್ಮಾನಿಸುವುದಕ್ಕಾಗುವುದಿಲ್ಲ. 55 ಸಾವಿರ ಜನ ಪ್ರತಿನಿಧಿಗಳು ಏನಿದ್ದಾರೆ, ಅವರು ಪ್ರತಿಯೊಂದು ಪಕ್ಷಕ್ಕೆ ಸೇರಿದವರು ಇದ್ದಾರೆ. ಅವರ ಅಭಿಪ್ರಾಯವನ್ನು ಕೇಳೋಣ. ಆದುದರಿಂದ ಮಾನ್ಯ ಮಂತ್ರಿಗಳಿಗೆ ಮನವಿ ಮಾಡುತ್ತೇನೆ, ಇಷ್ಟೊಂದು ಅವಸರ ಬೇಡ, ಅಗತ್ಯ ಇದ್ದರೆ. ಯಾವುದನ್ನು ಒಪ್ಪಿಕೊಳ್ಳಬಹುದೋ ಅದನ್ನು ಒಪ್ಪುವುದಕ್ಕೆ ನಾವು ಸಿದ್ಧರಾಗಿದ್ದೇವೆ. ನಾವು ವಿರೋಧಕ್ಕಾಗಿ ವಿರೋಧ ಮಾಡುತ್ತಿಲ್ಲ. ತಾವು ದಯವಿಟ್ಟು ನಮ್ಮ ಭಾವನೆಗಳನ್ನು ಅರ್ಥ ಮಾಡಿಕೊಳ್ಳಬೇಕೆಂದು ಪ್ರಾರ್ಥಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ : ವಿರೋಧ ಪಕ್ಷದ ನಾಯಕರ ಅಭಿಪ್ರಾಯವನ್ನು ನಾನು ಸಂಪೂರ್ಣವಾಗಿ ಅರ್ಥಮಾಡಿಕೊಂಡಿದ್ದೇನೆ. ಈಗ ನಾವು ಇದನ್ನು ಅವಸರ ಅವಸರವಾಗಿ ಏನೂ ತಂದಿಲ್ಲ. ಮೊದಲೇ ಸುದೀರ್ಘವಾಗಿ ಆಲೋಚನೆ ಮಾಡಿ ತಂದಿದ್ದೇನೆ. 11 ತಿಂಗಳ ಕಾಲ ಯೋಚಿಸಿದ್ದೇವೆ. ನಿಮಗೆ ಈ ಒಂದು ಶಾಸನದಿಂದ ಅಕಸ್ಮಾತ್ ಪ್ರಯೋಜನವಾಗಿದ್ದರೆ ನಾನೂ ಸಹ ಸಂತೋಷ ಪಡುತ್ತಿದ್ದೆ. ಆದರೆ ಈ ಶಾಸನ ನಿಮ್ಮ ಪಕ್ಷಕ್ಕೆ ವಿರುದ್ಧವಾಗಿರುವುದನ್ನು ನಾವು ನೋಡಿದ್ದೇವೆ.

ಶ್ರೀ ಡಿ.ಬಿ. ಚಂದ್ರೇಗೌಡ : ಅಂದರೆ ನಿಮಗೆ ಅನುಕೂಲವಾಗುತ್ತದೆಂದು ತಿದ್ದುಪಡಿ ತಂದಿದ್ದೀರಾ?

ಶ್ರೀ ಬಿ. ಬಸವಲಿಂಗಪ್ಪ : ನಮ್ಮ ಅನುಕೂಲಕ್ಕೆ ನಾವು ತಂದೆವು. ನಮ್ಮ ಪಾರ್ಟಿಯ ಅನುಕೂಲಕ್ಕೆ ನಾವು ತಂದೆವು. ಅದಕ್ಕೋಸ್ಕರ ಮಾನ್ಯ ಸದಸ್ಯರು ...

ಶ್ರೀ ಬಿ.ಹೆಚ್. ಬನ್ನೀಕೋಡ್ : ಕಾನೂನು ತರುವುದು ಪಕ್ಷದ ಹಿತಕ್ಕಾಗಿ ಅಲ್ಲ, ಜನರ ಹಿತಕ್ಕಾಗಿ ತರಬೇಕು.

(ಗೊಂದಲ)

2 : 1990ನೇ ಕರ್ನಾಟಕ ಜಿಲ್ಲಾಪರಿಷತ್ತು, ತಾಲ್ಲೂಕು ಪಂಚಾಯಿತಿ ಸಮಿತಿಗಳು, ಮಂಡಲ ಪಂಚಾಯಿತಿ,

ನ್ಯಾಯ ಪಂಚಾಯಿತಿ ಹಾಗೂ ಇತರೆ ಕಾನೂನುಗಳ (ತಿದ್ದುಪಡಿ) ವಿಧೇಯಕ :

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತ್‌ರಾಜ್ ಹಾಗೂ ಪಶುಸಂಗೋಪನಾ ಸಚಿವರು):–

ಮಾನ್ಯ ಅಧ್ಯಕ್ಷರೆ, "1990ನೇ ಕರ್ನಾಟಕ ಜಿಲ್ಲಾಪರಿಷತ್ತು, ತಾಲ್ಲೂಕು ಪಂಚಾಯಿತಿ ಸಮಿತಿಗಳು, ಮಂಡಲ ಪಂಚಾಯಿತಿ, ನ್ಯಾಯ ಪಂಚಾಯಿತಿ ಹಾಗೂ ಇತರೆ ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ".

ಅಧ್ಯಕ್ಷರು:– ಪ್ರಸ್ತಾವ ಏನೆಂದರೆ :

"1990ನೇ ಕರ್ನಾಟಕ ಜಿಲ್ಲಾಪರಿಷತ್ತು, ತಾಲ್ಲೂಕು ಪಂಚಾಯಿತಿ ಸಮಿತಿಗಳು, ಮಂಡಲ ಪಂಚಾಯಿತಿ, ನ್ಯಾಯ ಪಂಚಾಯಿತಿ ಹಾಗೂ ಇತರೆ ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು, ಮಂಡಿಸಲು ಅನುಮತಿಯನ್ನು ನೀಡುವುದು."

ಪ್ರಸ್ತಾವ ಅಂಗೀಕೃತವಾಯಿತು ಮತ್ತು ಮಂಡನೆಗೆ ಅನುಮತಿಯನ್ನು ನೀಡಲಾಯಿತು.

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತ್‌ರಾಜ್ ಹಾಗೂ ಪಶುಸಂಗೋಪನಾ ಸಚಿವರು):–

ಮಾನ್ಯ ಅಧ್ಯಕ್ಷರೆ, "1990ನೇ ಕರ್ನಾಟಕ ಜಿಲ್ಲಾಪರಿಷತ್ತು, ತಾಲ್ಲೂಕು ಪಂಚಾಯಿತಿ ಸಮಿತಿಗಳು, ಮಂಡಲ ಪಂಚಾಯಿತಿ, ನ್ಯಾಯ ಪಂಚಾಯಿತಿ ಹಾಗೂ ಇತರೆ ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು, ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು:– ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲಾಗಿದೆ.

ಶ್ರೀ ಡಿ.ಬಿ. ಚಂದ್ರೇಗೌಡ:– ಈ ವಿಧೇಯಕವನ್ನು ನಾವು ಸ್ಪಷ್ಟವಾಗಿ ವಿರೋಧಿಸಬೇಕಾಗುತ್ತದೆ. ಈ ವಿಧೇಯಕದ ಚರ್ಚೆಗೆ ಮುನ್ನ ಸಾಕಷ್ಟು ಕಾಲಾವಕಾಶಬೇಕೆಂದು ನಾನು ತಮ್ಮಲ್ಲಿ ಪ್ರಾರ್ಥಿಸುತ್ತೇನೆ. ನಿಮಗೆ ಕಾಲಾವಕಾಶ ಕೊಡುವುದಕ್ಕೆ ಮನಸ್ಸಿಲ್ಲದಿದ್ದರೆ ನಾವು ಅದನ್ನು ವಿರೋಧಿಸಬೇಕಾಗುತ್ತದೆ. ಈ ವಿರೋಧವನ್ನು ನಾವು ಎಷ್ಟರಮಟ್ಟಿಗೆ ನಮ್ಮ ಶಕ್ತಿ ಇದೆಯೋ ಅಷ್ಟೂ ವಿರೋಧಿಸುತ್ತೇವೆ, ಈ ಶಾಸನ ಸಭೆಯಲ್ಲಿ ಈ ಮಸೂದೆಯ ಬಗ್ಗೆ ಮರುಪರಿಶೀಲನೆಗೆ ಈಗಲೂ ಕೂಡ ಅವಕಾಶ ಇಲ್ಲವೆಂದರೆ ಅನಿವಾರ್ಯವಾಗಿ ನಾವು ಧರಣಿ ಮಾಡಬೇಕಾಗುತ್ತದೆ. ಅದಕ್ಕೆ ಅವರೇ ಹೊಣೆಗಾರರು ಎಂದು ಕೂಡ ಹೇಳಬೇಕಾಗುತ್ತದೆ. *

(ಮಾನ್ಯ ವಿರೋಧ ಪಕ್ಷದ ಸದಸ್ಯರು ಧರಣಿಕೂರಲು ಆಗಮಿಸುತ್ತಿದ್ದರು)

ಅಧ್ಯಕ್ಷರು:– ಈಗ ಸಭೆಯನ್ನು 3–40 ರವರೆಗೆ ಮುಂದೂಡಲಾಗಿದೆ.

(ಸಭೆಯನ್ನು 2.40ಕ್ಕೆ ಮುಂದೂಡಲ್ಪಟ್ಟಿತು)

ಸದನವು ಮತ್ತೆ 4 ಗಂಟೆಗೆ ಸಮಾವೇಶಗೊಂಡಿತು.

(ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

(ಜನತಾದಳ ಪಕ್ಷದ ಸದಸ್ಯರು ಸದನದ ಬಾವಿಯಲ್ಲಿ ಧರಣಿ ಕುಳಿತು "ಕರಾಳ ಮಸೂದೆಗೆ ಧಿಕ್ಕಾರ" ಎಂಬ ಘೋಷಣೆ ಮಾಡುತ್ತಿದ್ದರು)

ಉಪಾಧ್ಯಕ್ಷರು:– ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಸದಸ್ಯರು ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ ಸಭೆಯನ್ನು ನಡೆಸುವುದಕ್ಕೆ ಸಹಕಾರವನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

* Annexre (2)

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:– ಇದು ಒಂದು ಪೋಲೀಸ್ ರಾಜ್ಯವಾಗಿದೆ. ಸ್ವಾರ್ಥಕ್ಕೆ, ಪ್ರಜಾಪ್ರಭುತ್ವದ ಕಗ್ಗೊಲೆ ಮಾಡಿರತಕ್ಕ ಕಾಂಗ್ರೆಸ್ ಸರ್ಕಾರದ ನೀತಿ ಸರಿಯಲ್ಲ ಎಂದು ನಾನು ಹೇಳುತ್ತೇನೆ. ಈ ...

(ಗೊಂದಲ)

ಉಪಾಧ್ಯಕ್ಷರು:– ದಯವಿಟ್ಟು ತಾವು ಕುಳಿತುಕೊಳ್ಳಬೇಕು. ಈಗ ಮಾನ್ಯ ವಿರೋಧ ಪಕ್ಷದ ನಾಯಕರು, ಉಪನಾಯಕರು ಮತ್ತು ಸದಸ್ಯರು ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ ಸಭೆಯನ್ನು ನಡೆಸಲು ನಮಗೆ ಸಹಕಾರ ಕೊಡಬೇಕೆಂದು ನಾನು ಮತ್ತೊಮ್ಮೆ ತಮ್ಮೆಲ್ಲರಲ್ಲೂ ಕೇಳಿಕೊಳ್ಳುತ್ತೇನೆ.

("ಸಾಧ್ಯವಿಲ್ಲ" ಎಂದು ಧರಣಿ ಕುಳಿತ ಸದಸ್ಯರು ಕೂಗುತ್ತಿದ್ದರು)

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:– ಇಂತಹ ಶಾಸನ ಯಾರಿಗೂ ಬೇಕಾಗಿಲ್ಲ.

ಉಪಾಧ್ಯಕ್ಷರು : ಈ ತಿದ್ದುಪಡಿಯ ಬಗ್ಗೆ....

ಶ್ರೀ ವಾಟಾಳ್ ನಾಗರಾಜ್ : ಈ ರೀತಿಯ ತಿದ್ದುಪಡಿ ತರತಕ್ಕದ್ದು ಸರಿಯಲ್ಲ.

ಉಪಾಧ್ಯಕ್ಷರು:– ಈ ಮಸೂದೆ ಚರ್ಚೆಗೆ ಬಂದಾಗ ಮಾತನಾಡಲು ಸಾಕಷ್ಟು ಅವಕಾಶ ಇರುತ್ತದೆ. ದಯಮಾಡಿ ಮಾನ್ಯ ಸದಸ್ಯರು ತಮ್ಮ ಸ್ಥಾನಕ್ಕೆ ಹೋಗಿ ಇವತ್ತು ಸಭೆ ನಡೆಸುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ:– ಈ ಸರ್ವಾಧಿಕಾರಿ ಧೋರಣೆ ಸರಿಯಲ್ಲ; ಇದು ಒಳ್ಳೆಯದಲ್ಲ.

ಶ್ರೀ ವಾಟಾಳ್ ನಾಗರಾಜ್:– ಪ್ರಜಾಪ್ರಭುತ್ವಕ್ಕೆ ಇದು ಅಗೌರವ. ಇದು ಸರಿಯಾದುದಲ್ಲ. ಇದು ಸಾಧುವೇ ಅಲ್ಲ. ಇದನ್ನು ವಾಪಸ್ಸು ತೆಗೆದುಕೊಳ್ಳಬೇಕು. ಸಭೆಯನ್ನು ನೀವು ಮುಂದಕ್ಕೆ ಹಾಕಿ.

ಉಪಾಧ್ಯಕ್ಷರು :– ಮಾನ್ಯ ಸದಸ್ಯರುಗಳು ತಮ್ಮ ತಮ್ಮ ಪೀಠಗಳಿಗೆ ಹೋಗಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್:– ಇದು ಒಳ್ಳೆಯದಲ್ಲ. ಇದು ಜನಾಭಿಪ್ರಾಯಕ್ಕೆ ವಿರೋಧವಾಗಿದೆ. ಇದು ಯಾರಿಗೋಸ್ಕರ? ಈ ತಿದ್ದುಪಡಿ ಮಸೂದೆ ಏತಕ್ಕೋಸ್ಕರ? ಯಾರ ಉದ್ಧಾರಕ್ಕೋಸ್ಕರ.

ಉಪಾಧ್ಯಕ್ಷರು:– ಇತರ ಬಗ್ಗೆ ಮಾತನಾಡಲಿಕ್ಕೆ ತಮಗೆ ಸಾಕಷ್ಟು ಅವಕಾಶವಿದೆ. ಈ ತಿದ್ದುಪಡಿ ಮಸೂದೆಯ ಬಗ್ಗೆ ತಮ್ಮ ನಿಲುವನ್ನು ವ್ಯಕ್ತಪಡಿಸಬಹುದು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:– ಇದೊಂದು ಕರಾಳ ಮಸೂದೆ. ಇದು ಪೋಲೀಸ್ ರಾಜ್ಯ. ಪ್ರಜಾಪ್ರಭುತ್ವವನ್ನು ಅಣಕಿಸುವ, ಪ್ರಜಾಪ್ರಭುತ್ವವನ್ನು ಕೊಲೆ ಮಾಡಿರತಕ್ಕ ಸರ್ಕಾರ ಇದು. ಇದು ಸರಿಯಾದುದಲ್ಲ. ನಾನು ಉಪಾಧ್ಯಕ್ಷರಲ್ಲಿ ಪ್ರಾರ್ಥನೆ ಮಾಡುತ್ತಿದ್ದೇನೆ; ತಮಗೆ ನಾವು ಗೌರವ ಕೊಡುತ್ತಿದ್ದೇನೆ; ದಯಮಾಡಿ ಈ ಸಭೆಯನ್ನು ಮುಂದಕ್ಕೆ ಹಾಕಿ. ನಾವು ನಾಳೆ ಕುಳಿತು ಚರ್ಚೆ ಮಾಡೋಣ.

ಉಪಾಧ್ಯಕ್ಷರು:– ಈಗ ನಾವು ಬಹುಮುಖ್ಯವಾದ ಚರ್ಚೆಯನ್ನು ಮುಂದುವರಿಸಬೇಕಾಗಿದೆ. ರಾಜ್ಯದ ಬರಗಾಲ ಪರಿಸ್ಥಿತಿಯ ಬಗ್ಗೆ ಚರ್ಚೆ ಮಾಡಬೇಕಾಗಿದೆ. ತಾವುಗಳೆಲ್ಲರೂ ಸಹಕಾರವನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್:– ಐದು ವರ್ಷಗಳ ಅವಧಿಯನ್ನು ನಾಲ್ಕು ವರ್ಷಗಳಿಗೆ ಇಳಿಸಿ ತಿದ್ದುಪಡಿ ಮಸೂದೆಯನ್ನು ತಂದು ಹಾಳು ಮಾಡಿದ್ದಾರೆ. ಪ್ರಜಾಪ್ರಭುತ್ವವನ್ನು ಕೊಲೆ ಮಾಡತಕ್ಕ ಸರ್ಕಾರದ ನಿಲುವು ಸರಿಯಾದುದಲ್ಲ.

(ಬಾವಿಯೊಳಗಿನ ಜನತಾದಳ ಸದಸ್ಯರುಗಳ ಪೈಕಿ ಐದಾರು ಜನ ಮಾನ್ಯ ಸದಸ್ಯರು ಮಾತನಾಡುತ್ತಿದ್ದರು)

* * * *

(ಆಡಳಿತ ಪಕ್ಷದ ಸದಸ್ಯರು ಐದಾರು ಜನ ಎದ್ದು ನಿಂತು ಮಾತನಾಡುತ್ತಿದ್ದರು)

* * * *

(ಬಾವಿಯೊಳಗಿದ್ದ ಸದಸ್ಯರು ಈ ಮಸೂದೆಗೆ ಧಿಕ್ಕಾರವೆಂದು ಕೂಗುತ್ತಿದ್ದರು)

(ಶ್ರೀ ಎಲ್.ಆರ್. ಶಿವರಾಮೇಗೌಡರು ಮತ್ತು ಇತರೆ ಸದಸ್ಯರುಗಳು ಈ ಪ್ರಗತಿ ಪರವಾದ ಮಸೂದೆಗೆ ಜಯವಾಗಲಿ ಎಂದು ಕೂಗುತ್ತಿದ್ದರು)

(ಗೊಂದಲ)

ಉಪಾಧ್ಯಕ್ಷರು:– ಸಭೆಯೊಳಗಡೆ ಈ ರೀತಿ ಮಾಡತಕ್ಕದ್ದು ಸರಿಯಾದುದಲ್ಲ.

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಉಪಾಧ್ಯಕ್ಷೆಣೀಯವರೆ, ಸಭೆಯನ್ನು ಮುಂದಕ್ಕೆ ಹಾಕಿ.

ಉಪಾಧ್ಯಕ್ಷರು:– ಈಗ ಬಹುಮುಖ್ಯವಾದ ಬರಗಾಲದ ಬಗ್ಗೆ ಚರ್ಚೆ ನಡೆಯಬೇಕಾಗಿದೆ. ಅದರ ಬಗ್ಗೆ ತಾವು ಎಲ್ಲರೂ ಮಾತನಾಡುವವರು ಇದ್ದೀರಿ. ಮುಂದೆ ಈ ಮಸೂದೆಯ ಬಗ್ಗೆಯೂ ತಾವು ಸಾಕಷ್ಟು ಮಾತನಾಡಲಿಕ್ಕೆ ಅವಕಾಶವಿದೆ.

ಶ್ರೀ ವಾಟಾಳ್ ನಾಗರಾಜ್:– ಇದು ಸರ್ವಾಧಿಕಾರಿ ರಾಜ್ಯ. ಸರ್ವಾಧಿಕಾರಿ ಪ್ರವೃತ್ತಿ ನಮಗೆ ಬೇಕಾಗಿಲ್ಲ.

ಉಪಾಧ್ಯಕ್ಷರು:– ಹಾಗಿದ್ದರೆ ಬರಗಾಲದ ಬಗ್ಗೆ ಮಾತನಾಡುವುದು ಬೇಡವೆ?

ಬಾವಿಯೊಳಗಿದ್ದ ಜನತಾದಳದ ಸದಸ್ಯರುಗಳು ಈ ಮಸೂದೆಗೆ ಮತ್ತು ಸರ್ಕಾರಕ್ಕೆ ದಿಕ್ಕಾರವೆಂದು ಕೂಗುತ್ತಿದ್ದರು)

ಉಪಾಧ್ಯಕ್ಷರು:– ಈಗ ಸಭೆಯನ್ನು ನಡೆಸುವುದಕ್ಕೆ ತಾವೆಲ್ಲರೂ ಸಹಕಾರ ಕೊಡಬೇಕು.

(ಗೊಂದಲ)

ಉಪಾಧ್ಯಕ್ಷರು:– ಮಾನ್ಯ ಸಚಿವರಾದ ನರಸಿಂಹಮೂರ್ತಿಯವರು ಏನೋ ಹೇಳುತ್ತಾರೆ ನೋಡೋಣ.

ಶ್ರೀ ವಾಟಾಳ್ ನಾಗರಾಜ್:– ಈ ಮಸೂದೆ ನಮಗೆ ಬೇಕಾಗಿಲ್ಲ. ಜನರಿಗೆ ವಂಚನೆ ಮಾಡತಕ್ಕದ್ದು ಸರಿಯಲ್ಲ. ಈ ಪೋಲೀಸ್ ರಾಜ್ಯಕ್ಕೆ, ಪ್ರಜಾಪ್ರಭುತ್ವ ವಿರೋಧಿ ಸರ್ಕಾರಕ್ಕೆ ಧಿಕ್ಕಾರ. ಇದು ನಮಗೆ ಬೇಕಾಗಿಲ್ಲ.

(ಗೊಂದಲ)

ಉಪಾಧ್ಯಕ್ಷರು:– ಈಗ ಸಭೆಯನ್ನು 15 ನಿಮಿಷಗಳ ಕಾಲ ಮುಂದಕ್ಕೆ ಹಾಕಲಾಗಿದೆ.

(ಸಭೆಯನ್ನು 4 ಗಂಟೆ 10 ನಿಮಿಷಗಳಿಗೆ ಮುಂದೂಡಲಾಯಿತು)

(ಸಭೆ 6–00ಕ್ಕೆ ಮತ್ತೆ ಸಮಾವೇಶಗೊಂಡಿತು)

(ಅಧ್ಯಕ್ಷರು ಶ್ರೀ ಎಸ್. ಎಂ. ಕೃಷ್ಣರವರು ಪೀಠವನ್ನು ಅಲಂಕರಿಸಿದರು)

(ಜನತಾ ದಳದ ಸದಸ್ಯರು ಕರಾಳ ಮಸೂದೆಗೆ ಧಿಕ್ಕಾರ ಎಂದು ಕೂಗುತ್ತಿದ್ದರು)

(ಬಾರಿ ಗೊಂದಲ)

† ಶ್ರೀ ಬಿ.ಎಸ್. ಯಡಿಯೂರಪ್ಪ:– ಮಾನ್ಯ ಅಧ್ಯಕ್ಷರೇ, ಈದೆಲ್ಲಾ ಪರಿಷತ್ತಿನ ಕರಾಳ ಶಾಸನವನ್ನು ವಿರೋಧ ಮಾಡುತ್ತಿದ್ದೇವೆ. ನಾವು ವೆಲ್ ಒಳಗಡೆ ಬರುವ ಪರಿಸ್ಥಿತಿಯಲ್ಲಿಲ್ಲ. ಒಂದು ಕಾಲದಲ್ಲಿ ನಮ್ಮ ಕಾಂಗ್ರೆಸ್ ಪಕ್ಷದ ನಾಯಕರು ನಾವು ಹಿಂದೆ ಮಾಡಿದ ತಪ್ಪನ್ನು ಮಾಡುವುದಿಲ್ಲವೆಂದು ಹೇಳಿದರು. ನಾವು ಜನತೆಯನ್ನು ಕಾಪಾಡುತ್ತೇವೆಂದು ಆಶ್ವಾಸನೆ ಕೊಟ್ಟಿದ್ದರು. ಈ ರೀತಿ ಹೇಳಿ ಅಧಿಕಾರಕ್ಕೆ ಬಂದ ಇವರು ...

(ಬಾರಿ ಗೊಂದಲ)

ಅಧ್ಯಕ್ಷರು:– ಮಾನ್ಯ ಸದಸ್ಯರುಗಳು ದಯಮಾಡಿ ಒಂದು ನಿಮಿಷ ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ ಅನಂತರ ಸಮಾಧಾನಕರವಾಗಿ ಈ ಸಮಸ್ಯೆಯನ್ನು ಬಗೆಹರಿಸಲಿಕ್ಕೆ ಯೋಗ್ಯವಾದಂತಹ ಭೂಮಿಕೆಯನ್ನು ನಿರ್ಮಾಣ ಮಾಡಿಕೊಡಬೇಕೆಂದು ನನ್ನ ಪ್ರಾರ್ಥನೆ.

ಶ್ರೀ ವಾಟಾಳ್ ನಾಗರಾಜ್:– ಒಂದು ಒಳ್ಳೆಯ ಸೂಚನೆಯನ್ನು ತಾವು ಕೊಡುತ್ತಿದ್ದೀರಿ, ಅದು ನನಗೂ ಸ್ವಲ್ಪ ಆಶಾದಾಯಕವಾಗಿ ಕಾಣುತ್ತಿದೆ. ಈ ಸಮಸ್ಯೆಯನ್ನು ತೆರೆಮರೆಯಲ್ಲಿ ತಮ್ಮ ಕಾರ್ಯಾಲಯಕ್ಕೆ ಕರೆದು ಒಂದೆರಡು ನಿಮಿಷದಲ್ಲಿ ಇದನ್ನು ಬಗೆಹರಿಸಬಹುದು. ಅದಕ್ಕೆ ನಾವು ಸಹ ಬರುತ್ತೇವೆ. ತಮ್ಮ ಸಲಹೆಯನ್ನು ಕೇಳಿ, ಅದು ಒಂದು ಅನುಕೂಲ ವಾತಾವರಣವಾಗುವುದಾದರೆ ಅದು ಆಗಲಿ ಎನ್ನತಕ್ಕ ಮಾತನ್ನು ಹೇಳುತ್ತೇನೆ. ತಮಗೆ ಮಾನ್ಯತೆ ಕೊಡಬೇಕು, ಗೌರವ ಕೊಡಬೇಕು, ಆದರಿಂದ ತಾವು ಕರೆದು ಮಾತನಾಡಿದರೆ ನಾವು ಬರುತ್ತೇವೆ. ನಾವೆಲ್ಲಾ ಮುಖಂಡರುಗಳು ಬರುತ್ತೇವೆ ತಾವು ಕರೆದು ಮಾತನಾಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಹಿಂದೆ ಈ ಮಸೂದೆಯನ್ನು ಮಂಡನೆ ಮಾಡುವಾಗ ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಪರಿಶೀಲನೆಗೆ ಕಳುಹಿಸಿಕೊಟ್ಟು ಅದನ್ನು ಕೂಲಂಕುಷವಾಗಿ ಪರಿಶೀಲಿಸಿದ ನಂತರ ಅದನ್ನು ಪಾಸು ಮಾಡಿದ್ದೇವೆ. ಅದೇ ರೀತಿ ಇದನ್ನು ಈಗ ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ರೆಫರ್ ಮಾಡಿದರೆ ಅದಕ್ಕೆ ಯಾರದೂ ವಿರೋಧವಿಲ್ಲ.

ಅಧ್ಯಕ್ಷರು:– ಈಗ ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಒಂದು ಮಸೂದೆಯನ್ನು ಒಪ್ಪಿಸುವ ಸ್ಟೇಜ್ ಯಾವುದು ಹೇಳಿ? ಯಾವಾಗ ಆ ಸ್ಟೇಜ್ ಹೇಳಿ, ಆ ಸ್ಟೇಜ್‌ನ್ನು ನಾವು ತಲುಪಿದ್ದೆವೆಯೇ, ಇವತ್ತು ಆಗಿರತಕ್ಕದ್ದು ಏನು ಅಂದರೆ, ಮಸೂದೆ ಮಂಡನೆ ಆಗಿದೆ, ಎಷ್ಟೊ ಮಸೂದೆಗಳು ಮಂಡನೆಯಾಗುತ್ತವೆ. ತಿಂಗಳುಗಟ್ಟಲೆ ಅವು ಪಾಸ್ ಆಗುವುದಿಲ್ಲ. ಕೆಲವು ಸಮಯ ವಿಧಾನ ಸಭೆ ವಿಸರ್ಜನೆ ಆಗಿಹೋದರೆ ಲ್ಯಾಪ್ಸ್ ಆಗುತ್ತವೆ. ಆದ್ದರಿಂದ ನಿಮ್ಮ ಸಲಹೆ ಏನಿದೆ, ಇದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಹಾಕಬೇಕು ಅನ್ನತಕ್ಕದ್ದು, ಈ ಘಟ್ಟದಲ್ಲಿ ಅದನ್ನು ಸಭೆ ಪರಿಶೀಲಿಸಲು ಸಾಧ್ಯವಿಲ್ಲ. ಅಷ್ಟೇ ನಾನು ಹೇಳುತ್ತಿರುವುದು.

ಶ್ರೀ ಬಿ.ಎಸ್. ಯಡಿಯೂರಪ್ಪ:– ಸನ್ಮಾನ್ಯ ಮುಖ್ಯಮಂತ್ರಿಗಳು ಅನೇಕ ಸಂದರ್ಭಗಳಲ್ಲಿ ಕರ್ನಾಟಕ ರಾಜ್ಯದ ಅನೇಕ ತೀವ್ರವಾದಂತಹ ಸಮಸ್ಯೆಯನ್ನು ಬಗೆಹರಿಸುವಂತಹ ಕಾಲದಲ್ಲಿ ಎಲ್ಲ ವಿರೋಧ ಪಕ್ಷದ ಮುಖಂಡರನ್ನೂ ಕರೆಸಿ ಅವರ ಸಹಕಾರವನ್ನು ತೆಗೆದುಕೊಂಡು, ಅವರ ಜೊತೆ ಚರ್ಚೆ ಮಾಡಿ ತೀರ್ಮಾನಕ್ಕೆ ಬರುವಂತಹ ಒಂದು ಹೊಸ ಪದ್ಧತಿಯನ್ನು ಹಾಕಿ ಕೊಟ್ಟಿದ್ದಾರೆ. ಹಾಗೆಯೇ ಈ ಜಿಲ್ಲಾ ಪರಿಷತ್ ಮಸೂದೆಗೆ ಒಂದು ತಿದ್ದುಪಡಿ ತರುವಂಥ ಸಂದರ್ಭದಲ್ಲೂ ಸಹ ಆದರಲ್ಲಿರತಕ್ಕಂಥ ಸಾಧಕಬಾಧಕಗಳ ಬಗ್ಗೆ ವಿರೋಧ ಪಕ್ಷದ ಎಲ್ಲಾ ಪ್ರಮುಖರನ್ನು ಕರೆದು ನಮ್ಮ ಅಭಿಪ್ರಾಯವನ್ನು ತೆಗೆದುಕೊಳ್ಳಬಹುದಾಗಿತ್ತು. ಅಂತಿಮವಾಗಿ ಅವರಿಗೆ ಬಹುಮತ ಇದೆ. ಏನಾದರೂ ತೀರ್ಮಾನ ತೆಗೆದುಕೊಳ್ಳಲಿ. ಆ ಒಂದು ಪ್ರಾಮಾಣಿಕ ಪ್ರಯತ್ನವನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಮಾಡಬಹುದಾಗಿತ್ತು ಆದರೆ ಆ ಕೆಲಸ ಆಗಲಿಲ್ಲ. ಅದಕ್ಕೋಸ್ಕರ ನಾನು ಏನು ಹೇಳುತ್ತಿದ್ದೇನೆಂದರೆ, ತಮಗೆ ಗೊತ್ತಿರುವ ಹಾಗೆ ಅನೇಕ ಸಂದರ್ಭದಲ್ಲಿ ಹಿಂದೆ ಅಧಿಕಾರ ಕೆಳೆದುಕೊಂಡಂಥ ಸಂದರ್ಭದಲ್ಲಿ ನಾವು ಅನೇಕ ತಪ್ಪುಗಳನ್ನು ಮಾಡಿದ್ದೇವೆ. ಜನರು ನಮ್ಮ ತಪ್ಪುಗಳನ್ನು ಕ್ಷಮಿಸಬೇಕು, ಮತ್ತೆ ಆ ತಪ್ಪುಗಳನ್ನು ಮಾಡಲ್ಲ ಎಂದು ಹೇಳಿದಂಥ ನಮ್ಮ ಕಾಂಗ್ರಸ್ ಸ್ನೇಹಿತರು ಮತ್ತೊಮ್ಮೆ ಹಳೆಯ ಜಾಡಿನಲ್ಲೇ

ಹೊರಟಿದ್ದಾರೆ. ಅದಕ್ಕಾಗಿ ನಾನು ಹೇಳುವಂತಾದ್ದು, ಮಾನ್ಯ ಚಂದ್ರೇಗೌಡರು ಸಹಾ ಅದಕ್ಕೋಸ್ಕರ ಪ್ರಸ್ತಾಪ ಮಾಡಿದರು. ಅದನ್ನು ಈ ಸದನದಲ್ಲಿ ಇಡುವುದು ಬೇಡ. ಇದರ ಬಗ್ಗೆ ಚರ್ಚೆ ಮಾಡಿ ಒಂದು ತೀರ್ಮಾನಕ್ಕೆ ಬರೋಣ ಎಂದು ಪ್ರಾರಂಭದಲ್ಲಿಯೇ ಹೇಳಿದರು. ಆಗ ಮಾನ್ಯ ಸಭಾನಾಯಕರು ಇರಲಿಲ್ಲ. ಅವರು ಇದ್ದಿದ್ದರೆ ಅದನ್ನು ಒಪ್ಪಿಕೊಳ್ಳುತ್ತಿದ್ದರೋ ಏನೋ ಗೊತ್ತಿಲ್ಲ.

ಅಧ್ಯಕ್ಷರು:– ನಾನು ಒಂದು ಸೂಚನೆಯನ್ನು ಮಾಡುತ್ತೇನೆ, ದಯವಿಟ್ಟು ಮಾನ್ಯ ಸದಸ್ಯರು ಕುಳಿತುಕೊಳ್ಳಬೇಕು.

ಶ್ರೀ ಸಿ. ಬೈರೇಗೌಡ:– ಅಧ್ಯಕ್ಷರೆ, ಈ ಹೊಸ ಸರ್ಕಾರ ಬಂದಮೇಲೆ ಅನೇಕ ವಿಚಾರಗಳಲ್ಲಿ ನಾವು ಸರ್ಕಾರದ ಜೊತೆಗೆ ಸಹಕಾರ ಕೊಡುತ್ತಿದ್ದೇವೆ. ಅವರು ಪ್ರಮುಖವಾದ ವಿಚಾರಗಳ ಬಗ್ಗೆ ಅವರು ಕರೆದು ಚರ್ಚೆ ಮಾಡಿದಾಗ ಸಹಕಾರ ಕೊಟ್ಟಿದ್ದೇವೆ. ಅದು ನದಿ ನೀರಿನ ಹಂಚಿಕೆ ಇರಬಹುದು, ಅಥವಾ ರಾಜ್ಯದಲ್ಲಿ ಮೊನ್ನೆ ಉದ್ಭವವಾಗಿದ್ದಂಥ ಲಾ ಅಂಡ್ ಆರ್ಡರ್ ಸಿಚ್ಯುಯೇಷನ್ ಇರಬಹುದು, ಅಥವಾ ಯಾವುದೇ ಪ್ರಮುಖವಾದಂತಾದ್ದು ರಾಜ್ಯದಲ್ಲಿ ಕಂಡುಬಂದಿರುವಂತಾದ್ದು ಇರಬಹುದು. ನಾವು ನಮ್ಮ ಶಕ್ತಿಮೀರಿ ನಮ್ಮ ಸಹಕಾರವನ್ನು ಕೊಡುತ್ತಿದ್ದೇವೆ. ಇವೊತ್ತು ಏನಾಗಿದೆ, ಶೇಕಡಾ 75ರಷ್ಟು ಜನಸಂಖ್ಯೆಯ ಅಭಿವೃದ್ಧಿಯ ಜವಾಬ್ದಾರಿಯನ್ನು ಹೊತ್ತಿರತಕ್ಕಂಥ ಸಂಸ್ಥೆಗಳು ಮಂಡಲ್‌ಪಂಚಾಯತ್ ಮತ್ತು ಜಿಲ್ಲಾ ಪರಿಷತ್‌ಗಳು, ಇದಕ್ಕೆ ಫಾರ್ ರೀಚಿಂಗ್ ಈ ತಿದ್ದುಪಡಿಯನ್ನು ತರತಕ್ಕಂಥ ಸಂದರ್ಭದಲ್ಲಿ ಕೊನೆಯ ಪಕ್ಷ ಕರಟಿಸಿಗಾದರೂ ಈ ಸದನದಲ್ಲಿ ಇರತಕ್ಕ ವಿರೋಧ ಪಕ್ಷದ ನಾಯಕರನ್ನು ಮತ್ತು ಮುಖಂಡರುಗಳನ್ನು ಕರೆದು ನಾವು ಹೀಗೆ ಮಾಡುತ್ತಿದ್ದೇವೆ. ನಿಮ್ಮ ಅಭಿಪ್ರಾಯ ಏನಿದೆ, ಯಾವ ತರಹ ಮಾಡೋಣ ಅನ್ನತಕ್ಕ ಒಂದು ಸದಭಿಪ್ರಾಯದ ಮಾತು ಆದರೂ ಅವರಿಂದ ಬಂದಿದ್ದರೆ, ಇವೊತ್ತು ಈ ಘಟನೆಗಳಿಗೆ ಅವಕಾಶ ಖಂಡಿತ ಇರುತ್ತಿರಲಿಲ್ಲ. ಏನ್ರಿ ನೀವು ಹೇಳಿದ್ದನ್ನೇ ಹೇಳ್ರಿ, ನಾವು ಮಾಡೋದನ್ನೇ ಮಾಡುತ್ತೇವೆ ಅಂದರೆ ಅದು ಬೇರೆ, ಆದರೆ ನಮ್ಮ ಸಹಕಾರ ಬೇಕು, ಮತ್ತೆ ನಾವು ಕೂಡ ಅಭಿವೃದ್ಧಿ ವಿಚಾರದಲ್ಲಿ ಅವರಿಗೆ ಎಷ್ಟು ಗ್ರಾಮಾಂತರ ಪ್ರದೇಶದ ಬಗ್ಗೆ ಕಾಳಜಿ ಇದೆಯೋ, ನಮಗೂ ಕೂಡ ಅಷ್ಟೇ ಕಾಳಜಿ ಇದೆ. ಅವರಿಗೆ ಕಾಳಜಿ ಇಲ್ಲ ಎಂದು ಹೇಳತಕ್ಕದ್ದು ಅಲ್ಲ. ಅಥವಾ ನಮಗೆ ಇಲ್ಲ ಎನ್ನತಕ್ಕ ಭಾವನೆ ಅವರಲ್ಲಿ ಇಲ್ಲ. ಈ ಭಾವನೆಗಳು ಈ ರೀತಿ ಇರುವಾಗ ಒಂದು ಪ್ರಮುಖವಾದಂಥ ಒಂದು ಕಾಯಿದೆಯನ್ನು ಇಲ್ಲಿ ತರತಕ್ಕಂಥ ಪರಿಸ್ಥಿತಿಯಲ್ಲಿ ನಮ್ಮ ಸಹಕಾರವನ್ನು ಅವರು ಕೇಳಬೇಕಾಗಿರತಕ್ಕಂತಾದ್ದು ಅವರ ಜವಾಬ್ದಾರಿ, ಜವಾಬ್ದಾರಿ ಸ್ಥಾನದಲ್ಲಿರತಕ್ಕಂಥವರು ಅಧಿಕಾರ ನಡೆಸತಕ್ಕಂತವರು, ಆಡಳಿತ ನಡೆಸತಕ್ಕಂತಹವರಲ್ಲಿ ಆ ಸಹಾನುಭೂತಿ ಇರಬೇಕಾಗಿತ್ತು. ಅದು ಅವರ ಕರ್ತವ್ಯ ಕೂಡ ಆಗಬೇಕಾಗಿತ್ತು. ಈಗ ನಾವು 190 ಜನ ಇದ್ದೇವೆ; ನಾವು ಕೈ ಎತ್ತುತ್ತೇವೆ, ಆ ಮಟ್ಟಕ್ಕೆ ಇವೊತ್ತಿನ ದಿವಸ ತೆಗೆದುಕೊಂಡು ಹೋದರೆ ಹೇಗೆ?

(ಗೊಂದಲ)

ಅಧ್ಯಕ್ಷರು:– ಬೈರೇಗೌಡರೆ, ನಾನು ಹೇಳುವುದನ್ನು ಕೇಳಿ. ಪ್ರಜಾಪ್ರಭುತ್ವದಲ್ಲಿ, ಕೈ ಎತ್ತುವುದು ಅಂದರೆ, ಈಗ ಮಂಡಲ್ ಪಂಚಾಯತ್‌ನಲ್ಲಿ ಕೈ ಎತ್ತುವುದಿಲ್ಲವೇ? ಜಿಲ್ಲಾಪರಿಷತ್‌ನಲ್ಲಿ ಕೈ ಎತ್ತುವುದಿಲ್ಲವೇ? ಅದೇ ರೀತಿ ಇಲ್ಲಿಯೂ ಕೈ ಎತ್ತುತ್ತಾರೆ. ವಿರೋಧ ಮಾಡುವುದಕ್ಕೆ ನೀವು ಕೈ ಎತ್ತುತ್ತೀರಿ. ಮಸೂದೆ ಸಮರ್ಥನೆ ಮಾಡಲಿಕ್ಕೆ ಅವರು ಕೈ ಎತ್ತುತ್ತಾರೆ, ಅದರಲ್ಲಿ ವ್ಯತ್ಯಾಸ ಏನಿದೆ. ಆದುದರಿಂದಲೇ ನಾನು ಏನು ಸೂಚನೆ ಮಾಡುತ್ತಿದ್ದೇನೆ ಅಂದರೆ, ಇದು ಬಹಳ ಪ್ರಮುಖವಾದ ಮಸೂದೆಯೆಂದು ವಿರೋಧ ಪಕ್ಷದವರೂ ಅಭಿಪ್ರಾಯಪಡುತ್ತಾರೆ. ಆಡಳಿತ ಪಕ್ಷದವರೂ ಅಭಿಪ್ರಾಯವನ್ನು ಪಡುತ್ತಾರೆ. ಅವರೂ ಕೂಡ ಇದು ಬಹಳ ಪ್ರಮುಖವೆಂದು ಭಾವಿಸುತ್ತಾರೆ. ಆದ್ದರಿಂದ ಮಾನ್ಯ ಮುಖ್ಯ ಮಂತ್ರಿಗಳಿಗೆ ಮತ್ತು ಮಾನ್ಯ ಪಂಚಾಯತ್ ರಾಜ್ ಮಂತ್ರಿಗಳಿಗೆ ಏನು ಸೂಚಿಸುತ್ತಿದ್ದೇನೆಂದರೆ ತಾವು ವಿರೋಧಪಕ್ಷಗಳ ಎಲ್ಲ ಮುಖಂಡರನ್ನೂ ಕರೆಸಿ ಅವರ ಜೊತೆ ಸಮಾಲೋಚನೆ ಮಾಡಿ ಈ ವಿಚಾರದಲ್ಲಿ ಒಂದು ಒಮ್ಮತ ಮೂಡುವುದಕ್ಕೆ ಪ್ರಯತ್ನ ಮಾಡಬೇಕೆಂದು ನಾನು ಸೂಚನೆ ಮಾಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ:– ಮಾನ್ಯ ಅಧ್ಯಕ್ಷರೆ, ನಾನು ಒಂದು ಮಾತನ್ನು ತಮ್ಮಲ್ಲಿ ವಿನಂತಿಮಾಡಿಕೊಳ್ಳುತ್ತೇನೆ. ಏನೆಂದರೆ ಈ ಮಸೂದೆಯನ್ನು ಈಗಾಗಲೇ ಮಂಡಿಸಿದ್ದಾಗಿದೆ. ಈಗ ಪ್ರತಿಯೊಬ್ಬ ರಾಜಕೀಯ ಪಕ್ಷದವರೂ ತಮ್ಮದೇ ಆದಂಥ ಗೊತ್ತು ಗುರಿಯನ್ನು ಇಟ್ಟುಕೊಂಡಿರುತ್ತಾರೆ. ಈ ಮಸೂದೆಯ ಮೇಲೆ ಅವರು ಚರ್ಚೆಯನ್ನು ಪ್ರಾರಂಭ ಮಾಡಿದರೆ ಅವರು ಹೇಳುವುದರಲ್ಲಿ ಸತ್ಯಾಂಶ ಇದ್ದರೆ ಅದನ್ನು ನಾವು ಪುನರ್ ಪರಿಶೀಲಿಸುವುದಕ್ಕೆ ಅವಕಾಶ ಆಗುತ್ತದೆ.

(ಈ ಹಂತದಲ್ಲಿ ಮಾನ್ಯ ವಾಟಾಳ್ ನಾಗರಾಜ್‌ರವರು ಎದ್ದು ನಿಂತರು)

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಅಧ್ಯಕ್ಷರೆ ನಾನು ಏನನ್ನೂ ಕೂಡ ಮಾತನಾಡಿಯೇ ಇಲ್ಲ ನಾನು ಯಾವುದನೂ ವಿರೋಧವನ್ನೂಮಾಡುತ್ತಿಲ್ಲ.....

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ:– ಆದ್ದರಿಂದ ನಾವು ಹೇಳುವಂಥ ವಾದವನ್ನು ಅವರು ಒಪ್ಪುವಂಥ ಪರಿಸ್ಥಿತಿ ಬಂದರೆ ಅವರಿಗಿರತಕ್ಕ ಸಂಶಯ ಏನಿದೆ ಅದು ತನಗೆ ತಾನೇ ದೂರವಾಗುತ್ತದೆ. ಇದು ಚರ್ಚೆಗೆ ಅವಕಾಶವನ್ನು ಮಾಡಿಕೊಟ್ಟರೆ ಮಾತ್ರ ಈ ತಿದ್ದುಪಡಿಯ ಹಿನ್ನೆಲೆ ಏನಿದೆ, ಏನು ಅಭಿಪ್ರಾಯ ಇದೆ ಎನ್ನತಕ್ಕದ್ದು ಗೊತ್ತಾಗುತ್ತದೆ. ಇದರಲ್ಲಿ ಏನಾದರೂ ತಪ್ಪಿದ್ದರೆ, ಅವರು ಅದನ್ನು ಹೇಳುವುದು ಸರಿ ಎಂದು ಕಂಡುಬಂದರೆ ಅದನ್ನು ಒಪ್ಪಿಕೊಳ್ಳುವುದಕ್ಕೆ ನಾವು ಪ್ರಯತ್ನ ಮಾಡೋಣ. ಆದರೆ ಏನೂ ಚರ್ಚೆಯೇ ಆಗದೆ ಈ ಹಂತದಲ್ಲಿ ಗೊಂದಲವನ್ನು ಸೃಷ್ಟಿ ಮಾಡಿ ಈ ರೀತಿ ಧರಣಿ ಕೂತುಕೊಳ್ಳುವುದರಿಂದ ಯಾವುದೇ ಪರಿಹಾರವೂ ಸಿಕ್ಕುವುದಿಲ್ಲ. ಚರ್ಚೆಯನ್ನು ಮಾಡೋಣ. ಚರ್ಚೆಯನ್ನು ಮಾಡುವುದರಿಂದ ಅನೇಕ ವಿಷಯಗಳು ಹೊರಗೆ ಬರುತ್ತವೆ. ಮಾನ್ಯ ವಿರೋಧ ಪಕ್ಷದವರಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ, ನಾವು ಚರ್ಚೆಮಾಡೋಣ. ಅದರಲ್ಲಿ ಏನಾದರೂ ಅಂಥ ಸನ್ನಿವೇಶ, ಸಂದರ್ಭ ಬಂದಾಗ ಮಾನ್ಯ ಮಂತ್ರಿಗಳಿರುತ್ತಾರೆ, ತಾವು ಇದ್ದೀರಿ, ಆಗ ಪರಸ್ಪರ ಕೂತು ಚರ್ಚೆ ಮಾಡಿ ಒಂದು ಒಮ್ಮತಕ್ಕೆ ಬರೋಣ. ಆದರೆ ಈ ಹಂತದಲ್ಲಿ ಒಮ್ಮತಕ್ಕೆ ಬರತಕ್ಕದ್ದು ಏನಿದೆ ಎಂಬುದು ನನಗೆ ಗೊತ್ತಾಗುವುದಿಲ್ಲ. ಹಾಗಾದರೆ ಅಧಿಕಾರದಲ್ಲಿರತಕ್ಕ ಪಕ್ಷದವರು, ಸರ್ಕಾರದವರು ಯಾವುದೇ ಒಂದು ಮಸೂದೆಯನ್ನೂ ಸಭೆಯ ಮುಂದಿಟ್ಟು ಚರ್ಚೆಮಾಡುವುದಕ್ಕೆ ಅವಕಾಶವೇ ಇಲ್ಲವೆ? ಆ ರೀತಿ ಆದರೆ ನಾವು ಆಡಳಿತವನ್ನೇ ಮಾಡುವುದಕ್ಕಾಗುವುದಿಲ್ಲ. ಅವರು ಹೇಳತಕ್ಕ ವಿಚಾರ ನಿಜವಾಗಿಯೂ ಸರಿಯಾಗಿದ್ದರೆ ಸರ್ಕಾರ ಅದನ್ನು ಪರಿಶೀಲಿಸುವುದಕ್ಕೆ ಯಾವುದೇ ಅಭ್ಯಂತರವೂ ಇಲ್ಲ. ಆದ್ದರಿಂದ ನಾನು ತಮ್ಮ ಮುಖಾಂತರ ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ವಿಚಾರವನ್ನು ಪರಸ್ಪರ ಚರ್ಚೆಮಾಡೋಣ, ವಿಮರ್ಶೆ ಮಾಡೋಣ, ಈಗಾಗಲೇ ಇದು 4 ವರ್ಷಗಳ ಕಾಲ ಪ್ರಯೋಗ ನಡೆದಿದೆ. ಇದರಲ್ಲಿ ಅನೇಕ ಲೋಪದೋಷಗಳಿರುವುದು ಅವರಿಗೂ ಗೊತ್ತಿದೆ, ನಮಗೂ ಗೊತ್ತಿದೆ. ಕೋಲಾರ ಜಿಲ್ಲೆಯಿಂದ ಬಂದಿರತಕ್ಕ ಮಾನ್ಯಶಾಸಕರೇ ಹೇಳಲಿ, ಕೋಲಾರ ಜಿಲ್ಲಾ ಪರಿಷತ್ತು ಈಗ ಏನಾಗಿದೆ ಎಂಬುದನ್ನು ಈ ಪ್ರಯೋಗದಲ್ಲಿ ಕಂಡುಬಂದಂಥ ಲೋಪದೋಷಗಳನ್ನು ನಾವು ಪರಸ್ಪರ ಪ್ರಸ್ತಾಪ ಮಾಡಿಕೊಂಡರೆ ಈ ಶಾಸನಕ್ಕೆ ನಿಜವಾಗಿಯೂ ಒಂದು ಉತ್ತಮವಾದ ಮಾರ್ಗದರ್ಶನವನ್ನು ಮಾಡುವುದಕ್ಕೆ ನಮಗೆ ಸಾಧ್ಯವಾಗುತ್ತದೆ. ಈ ದೃಷ್ಟಿಯಿಂದ ಅವರು ಚರ್ಚೆಗೆ ಅವಕಾಶವನ್ನು ಮಾಡಿಕೊಡಲಿ. ನಾವು ಚರ್ಚೆಮಾಡೋಣ. ಚರ್ಚೆಯ ನಂತರ ಅದು ಯಾವ ಸ್ವರೂಪವನ್ನು ತೆಗೆದುಕೊಳ್ಳುತ್ತದೆಂದು ನೋಡೋಣ ಎಂದು ನಾನು ಅವರಲ್ಲಿ ಕಳಕಳಿಯಿಂದ ಪ್ರಾರ್ಥಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಮಾನ್ಯ ಅಧ್ಯಕ್ಷರೇ, ನಾವು ವಿರೋಧಪಕ್ಷದಲ್ಲಿದ್ದೇವೆಂದು ಹೇಳಿ ವಿರೋಧ ಮಾಡುವಂಥದ್ದನ್ನು ನಾವು ಮಾಡುತ್ತಿಲ್ಲ. ಸನ್ಮಾನ್ಯ ಅಧ್ಯಕ್ಷರೇ, ಈ ಕಡೆ ವಿರೋಧಪಕ್ಷದಲ್ಲಿ ಕುಳಿತುಕೊಂಡು ಸರ್ಕಾರದವರು ತರುವಂಥ ಬಿಲ್‌ಗಳ ಬಗ್ಗೆ ಇರಬಹುದು ಅಥವಾ ಬೇರೆ ವಿಷಯಗಳು ಬಂದಾಗ, ಜನತೆಯ ಪ್ರತಿನಿಧಿಗಳಾಗಿ ನಮ್ಮ ಕರ್ತವ್ಯವಿದೆ ಎಂದು ಹೇಳಿ ವಿರೋಧಪಕ್ಷದಿಂದ ಆ ಕೆಲಸವನ್ನು ಮಾಡುತ್ತಿದ್ದೇವೆ. ಈ ಪ್ರಜಾ ಪ್ರಭುತ್ವ ವ್ಯವಸ್ಥೆಯಲ್ಲಿ ಆಡಳಿತ ಪಕ್ಷಕ್ಕಿಂತ ಮಹತ್ತರವಾದ ಜವಾಬ್ದಾರಿಯಿಂದ

ವಿರೋದಪಕ್ಷದವರ ಮೇಲೂ ಸಹ ಇದೆ. ಇದನ್ನು ತಾವು ಒಪ್ಪಿಕೊಳ್ಳುತ್ತೀರೆಂದು ನಾವು ತಿಳಿದುಕೊಂಡಿದ್ದೇವೆ. ಇವತ್ತು ಈ ಬಿಲ್ಲನ್ನು ತರತಕ್ಕಂಥ ಸಂದರ್ಭದಲ್ಲಿ ಸನ್ಮಾನ್ಯ ಅಧ್ಯಕ್ಷರು ಈಗತಾನೇ ಅಪ್ಪಣೆ ಕೊಡಿಸಿದರು. ಇದರ ಬಗ್ಗೆ ಮಾತುಕತೆ ಆಡಬೇಕು; ಅದಕ್ಕೆ ಏನಾದರು ಒಂದು ಸೂಕ್ತ ಪರಿಹಾರವನ್ನು ಹುಡುಕೋಣವೆಂದು ಹೇಳಿದರು. ನಾನು ಹೇಳುವಂಥದ್ದು ಕನಿಷ್ಟ ಪಕ್ಷ ಸಭಾನಾಯಕರು ಮಾನ್ಯ ವಿರೋಧ ಪಕ್ಷದ ನಾಯಕರನ್ನು ನಮ್ಮಲ್ಲಿ ಕೆಲವರನ್ನು ಕರೆಸಿ ಬಹುಶಃ ನಮ್ಮ ಜೊತೆಯಲ್ಲಿ ಮಾತುಕತೆ ನಡೆಸಿದ್ದರೆ ಒಂದು ಒಮ್ಮತವಾದ ತೀರ್ಮಾನಕ್ಕೆ ಬರಬಹುದಾಗಿತ್ತು. ಅದರ ಬದಲು ಈ ರೀತಿ ಧಾರಳತನವನ್ನು ಆಡಳಿತಪಕ್ಷದವರು ತೋರದೆ ಇದ್ದರೆ ಅನೇಕ ಸಮಸ್ಯೆಗಳನ್ನು ಬಗೆಹರಿಸಲು ತುಂಬ ಕಷ್ಟವಾಗುತ್ತದೆ. ಅದಕ್ಕೋಸ್ಕರವಾಗಿ ವಿರೋಧ ಪಕ್ಷದ ನಾಯಕರು ಇದರ ಬಗ್ಗೆ ಸ್ಪಷ್ಟಮಾಡಿದರು. ಈ ಬಿಲ್ಲನ್ನು ಇಂಟ್ರಡ್ಯೂಸ್ ಮಾಡತಕ್ಕಂಥ ಸಂದರ್ಭದಲ್ಲಿ ಕಾನೂನಿನ ಚೌಕಟ್ಟಿನಲ್ಲಿ ನಾವು ಮಾಡಿಕೊಂಡಿರುವಂಥ ಒಂದು ವ್ಯವಸ್ತೆಯೊಳಗೆ ಬೇಕಾದಷ್ಟು ತಪ್ಪುಗಳು ಇರಬಹುಕು. ಆದರೂ ಸಹ ಈ ಬಿಲ್ಲನ್ನು ಮಂಡನೆ ಮಾಡಬೇಡಿ. ಅನೇಕವಾದಂಥ ಗೊಂದಲ ಇದರಲ್ಲಿ ಇದೆ, ಎಲ್ಲ ಜನರ ಹಿತದೃಷ್ಟಿಯಿಂದ ನೀವು ಯೋಚನೆ ಮಾಡುತ್ತಿರಬೇಕಾದರೆ. ಒಟ್ಟಿಗೆ ಒಂದು ತೀರ್ಮಾನ ಮಾಡಿ ಈ ಒಂದು ತಿದ್ದುಪಡಿ ತರೋಣವೆಂದು ಈ ಸಲಹೆಯನ್ನು ಮಾನ್ಯ ವಿರೋಧಪಕ್ಷದ ನಾಯಕರು ಮಾಡಿದರು. ಆ ಸಮಯದಲ್ಲಿ ಮಾನ್ಯ ಸಭಾನಾಯಕರು ಸಭೆಯಲ್ಲಿದ್ದರೆ ಅವರು ಸಹ ಒಪ್ಪುತ್ತಿದ್ದರು. ನಮಗೆ ಗೊತ್ತಿತ್ತು, ಏನೆಂದರೆ ಮಾನ್ಯ ಬಸವಲಿಂಗಪ್ಪನವರು ಯಾವಾಗ ಈ ಇಲಾಖೆಯನ್ನು ತೆಗೆದು ಕೊಂಡರೋ ಆಗಲೇ ಒಂದಲ್ಲ ಒಂದು ದಿವಸ ಗೊಂದಲ ಪ್ರಾರಂಭವಾಗುತ್ತದೆಂದು ನಮಗೂ ಗೊತ್ತಿತ್ತು, ಈ ರಾಜ್ಯದ ಜನರಿಗೂ ಗೊತ್ತಿತ್ತು. ಅದಕ್ಕೆ ಸನ್ಮಾನ್ಯ ಅಧ್ಯಕ್ಷರಲ್ಲಿ ವಿನಂತಿ ಮಾಡಿಕೊಳ್ಳುವುದು ಇಷ್ಟೇ, ತಾವೇನೋ ಸಲಹೆಯನ್ನು ಕೊಟ್ಟಿರಿ. ಇದನ್ನು ಈಗ ಇಂಟ್ರಡ್ಯೂಸ್ ಮಾಡಿದೆ ಈ ಒಂದು ಸಂದರ್ಭದಲ್ಲಿ ಇದನ್ನು ವಾಪಸ್ ತೆಗೆದುಕೊಳ್ಳುವುದಕ್ಕೆ ಅವಕಾಶವಿದೆ. ಅವರು ಅದನ್ನು ವಾಪಸ್ ತೆಗೆದುಕೊಳ್ಳಲಿ. ಅದನ್ನು ತೆಗೆದುಕೊಂಡ ನಂತರ ಇದರ ಬಗ್ಗೆ ಚರ್ಚೆ ಮಾಡೋಣ. ಅದರಿಂದ ತೊಂದರೆ ಏನು ಆಗುವುದಿಲ್ಲ. ಇವತ್ತು ಮಾನ್ಯ ಸಭಾನಾಯಕರು ಮುಂದೆ ಬಂದು, ಇದನ್ನು ವಾಪಸ್ ತೆಗೆದುಕೊಂಡು ವಿರೋಧ ಪಕ್ಷದ ನಾಯಕರ ಜೊತೆಯಲ್ಲಿ ಚರ್ಚೆಮಾಡಿ ಎಲ್ಲರೂ ಒಮ್ಮತದಿಂದ ತಿದ್ದುಪಡಿ ತರಲು ಅವಕಾಶ ಮಾಡಿಕೊಡಬೇಕು. ಅದಕ್ಕೆ ಮಾನ್ಯ ಸಭಾನಾಯಕರು ಒಂದು ಸರಿಯಾದ ಉತ್ತರವನ್ನು ಕೊಟ್ಟು ಜನರ ಹಿತದೃಷ್ಟಿಯಿಂದ ಒಂದು ಅಧಿಕಾರ ವಿಕೇಂದ್ರೀಕರಣದ ಬಗ್ಗೆ ಒಂದು ಕ್ರಾಂತಿಕಾರಕವಾದ ಒಂದು ಕೆಲಸ ಏನಾಗಿದೆ, ಅಲ್ಲಿರುವಂತಹ ಲೋಪದೋಷಗಳನ್ನು ತಿದ್ದುಪಡಿ ಮಾಡುವುದು ಅಗತ್ಯವಿದ್ದರೆ ಆ ಕಾನೂನ್ನು ಮಾರ್ಪಾಡು ಮಾಡಲೇಬೇಕಾಗುತ್ತದೆ. ಆದರೆ ಇಲ್ಲಿ ತಂದಿರತಕ್ಕಂಥ ಮಾರ್ಪಾಡು ಏನು? ಕೆಲವು ಜಿಲ್ಲಾ ಪರಿಷತ್‌ಗಳು ಕೆಲವರ ಕೈಯಲ್ಲಿದೆ, ಅದನ್ನು ಕಿತ್ತುಕೊಂಡು ತಮ್ಮ ಹತ್ತಿರ ತೆಗೆದುಕೊಳ್ಳಬೇಕೆಂಬುದನ್ನು ಬಿಟ್ಟರೆ ಬೇರೆ ಏನು ಇದೆ? 5 ವರ್ಷ ಇರುವುದನ್ನು 4 ವರ್ಷ ಮಾಡಿದ್ದೀರಿ . ಇದರ ವಿವರಕ್ಕೆ ನಾನು ಹೋಗುವುದಿಲ್ಲ. ಆದರೆ ನಾನು ಏನು ಹೇಳುತ್ತೇನೆಂದರೆ, ಮಾನ್ಯ ಸಭಾನಾಯಕರು ಈ ಬಿಲ್ಲನ್ನು ವಾಪಸ್ ತೆಗೆದುಕೊಂಡು ವಿರೋಧ ಪಕ್ಷದ ನಾಯಕರ ಜೊತೆಯಲ್ಲಿ ಚರ್ಚೆ ಮಾಡಿ ಆಮೇಲೆ ಜನರಿಗೆ ಅನುಕೂಲವಾಗುವಂಥ ಒಂದು ತಿದ್ದುಪಡಿಯನ್ನು ತಂದು ಇಡಬೇಕೆಂದು ಮತ್ತೊಮ್ಮೆ ಒತ್ತಾಯ ಮಾಡುತ್ತೇನೆ.

(ಗೊಂದಲ)

ಶ್ರೀ ಬಿ. ಬಸವಲಿಂಗಪ್ಪ:– ಮಾನ್ಯ ಅಧ್ಯಕ್ಷರೇ ಮಾನ್ಯ ಯಡಿಯೂರಪ್ಪನವರು ನನ್ನ ಬಗ್ಗೆ ಒಂದು ಮಾತನ್ನು ಇಟ್ಟಿದ್ದಾರೆ. ನನಗೆ ಯಾವಾಗ ಈ ಪೋರ್ಟ್‌ಪೋಲಿಯೋ ಬಂತು, ಅಂದರೆ ಏನೋ ಬರುತ್ತದೆಂದು ತಿಳಿದುಕೊಂಡಿದ್ದೇವೆಂದು ಹೇಳಿರುತ್ತಾರೆ, ಆದರೆ ಇದು ನನ್ನ ವಿಚಾರವಲ್ಲ. ಸಮಾಜದ ಬಗ್ಗೆ ನನ್ನ ವಿಚಾರವೂ ಇರಬಹುದು. ಆದರೆ ಒಂದು ಮಾತನ್ನು ಇಲ್ಲಿ ಹೇಳುತ್ತೇನೆ. ನಮ್ಮ ಕಾಂಗ್ರೆಸ್ ಪಕ್ಷ ಏನಿದೆ ಆ ಪಕ್ಷ ಒಮ್ಮತದಿಂದ ನನಗೆ ಈ ಕೆಲಸ ಮಾಡಬೇಕೆಂದು ಆದೇಶ ಕೊಟ್ಟಿದ್ದಾರೆ; ನಾನು ಪಕ್ಷದ ಪರವಾಗಿ ಈ ಕೆಲಸ ಮಾಡುತ್ತಿದ್ದೇನೆ. ಇದರಲ್ಲಿ ನನ್ನದು ಸ್ವಂತದ್ದೇನಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ:– ಒಂದು ನಿಮಿಷ ತಾವು ಈಲ್ಡ್ ಆದರೆ, ನಿಮ್ಮ ಪಕ್ಷ ಇದಕ್ಕೆ ಒಪ್ಪಿಗೆ ಕೊಟ್ಟರಬಹುದು. ಆದರೆ ಈ ರಾಜ್ಯದ ಜನತೆ ಇದಕ್ಕೆ ಒಪ್ಪಿಗೆ ಕೊಟ್ಟಿಲ್ಲ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ :– ಜನರ ಎದುರಿಗೆ ಹೋಗೋಣ. ಅವರಿಗೆ ಈ ಮಾತನ್ನು ಒಪ್ಪಿಸೋಣ.

(ಗೊಂದಲ)

ಅಧ್ಯಕ್ಷರು:– ಮಾನ್ಯ ಯಡಿಯೂರಪ್ಪನವರೇ ...

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಅಧ್ಯಕ್ಷರೇ ಇದನ್ನು ಸಾರ್ವಜನಿಕ ಅಭಿಪ್ರಾಯಕ್ಕೆ ಬಿಡಿ. ಅದು ಒಂದು ಒಳ್ಳೆಯ ಸಲಹೆಯಾಗುತ್ತದೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಈ ರೀತಿ ಗೊಂದಲ ಉಂಟು ಮಾಡಿ, ಬಂಗಾರಪ್ಪನವರು ಮುಖ್ಯ ಮಂತ್ರಿಗಳಾಗಿರುವ ಸಂದರ್ಭದಲ್ಲಿ ಈ ಸಂದರ್ಭದಲ್ಲಿ ಇಲ್ಲದಿರುವ ಅಡ್ಡಿ ಆತಂಕಗಳನ್ನು ಮಾಡಿ ಅವರ ಖರ್ಚಿಗೆ ಎಲ್ಲಿ ಧಕ್ಕೆ ಬರುವ ಕೆಲಸ ಮಾಡಿಯಾರು ಎಂದು ಆತಂಕವಾಗುತ್ತಿದೆ. ಏತಕ್ಕೋಸ್ಕರ ಈ ರೀತಿ ಮಾಡುತ್ತಿದ್ದಾರೆಂದು ನನಗೆ ಅರ್ಥವಾಗುತ್ತಿಲ್ಲ. ಬಹುಶಃ ಇದೊಂದು ವ್ಯವಸ್ಥಿತವಾದ ಕುತಂತ್ರ ಎಂದು ಕಾಣುತ್ತದೆ. ಅವರ ಕಾಲೆಳೆಯುವಂತಹ ಕೆಲಸ ನಡೆಯುತ್ತಿದೆ.

(ಬಾರೀ ಗೊಂದಲ)

ಇದರಲ್ಲಿ ನಿಶ್ಚಿತವಾದ ಷಡ್ಯಂತರ ಇದೆ. ಇವರು ವೀರೇಂದ್ರ ಪಾಟೀಲರಿಗೆ ಕೈಕೊಟ್ಟರು, ಈಗ ನಿಮಗೂ ಕೈಕೊಡುತ್ತಾರೆ.

ಅಧ್ಯಕ್ಷರು:– ಈಗ ಸಾರ್ವಜನಿಕ ಅಭಿಪ್ರಾಯಕ್ಕೆ ಇದನ್ನು ಕಳುಹಿಸಿಕೊಡಬೇಕೆಂದು ವಾಟಾಳ್ ನಾಗರಾಜ್ ಅವರು ಸೂಚನೆ ಮಾಡಿದರು. ಯಾವ ಸಮಯದಲ್ಲಿ ಇದನ್ನು ಕಳುಹಿಸಿಕೊಡಬೇಕು. ಇಲ್ಲಿ ನಿಯಮ 84 ಏನು ಹೇಳುತ್ತದೆಂದರೆ;

(1) 81ನೇ ನಿಯಮದಲ್ಲಿ ಉಲ್ಲೇಖಿತವಾದ ಪ್ರಸ್ತಾವವನ್ನು ಮಂಡಿಸಿದ ತರುವಾಯ ವಿಧೇಯಕದ ಮುಖ್ಯಾಂಶ ಮತ್ತು ಅದರ ಉಪಬಂಧಗಳನ್ನು ಸಾಮಾನ್ಯವಾಗಿ ಚರ್ಚಿಸಬಹುದು. ಆದರೆ ವಿಧೇಯಕದ ಮುಖ್ಯಾಂಶಗಳನ್ನು ವಿವರಿಸಲು ಅಗತ್ಯವಾಗಿರುವುದಕ್ಕಿಂತ ಹೆಚ್ಚಾಗಿ ವಿಧೇಯಕದ ವಿವರಗಳನ್ನು ಚರ್ಚಿಸತಕ್ಕುದಲ್ಲ.

(2) ಈ ಹಂತದಲ್ಲಿ ವಿಧೇಯಕಕ್ಕೆ ಯಾವುದೇ ತಿದ್ದುಪಡಿಗಳನ್ನು ಸೇರಿಸಲಾಗದು, ಆದರೆ–

(ಎ) ವಿಧೇಯಕವನ್ನು ಮಂಡಿಸುವ ಸದಸ್ಯನು ವಿಧೇಯಕವನ್ನು ಪರಿಗಣನೆಗೆ ತೆಗೆದುಕೊಳ್ಳಬೇಕೆಂದು ಪ್ರಸ್ತಾವ ಮಾಡಿದರೆ, ಯಾವನೇ ಸದಸ್ಯರು ವಿಧೇಯಕವನ್ನು ಸದನದ ಪರಿಶೀಲನಾ ಸಮಿತಿಗೆ ಅಥವಾ ಪರಿಷತ್ತಿನ ಸಮ್ಮತಿ ಪಡೆದು ಸದನಗಳ ಸಂಯುಕ್ತ ಸಮಿತಿಗೆ ಉಲ್ಲೇಖಿಸಬೇಕೆಂದು ಅಥವಾ ಪ್ರಸ್ತಾವದಲ್ಲಿ ನಿರ್ದಿಷ್ಟಪಡಿಸಬಹುದಾದಂತಹ ದಿನಾಂಕದೊಳಗೆ ಅದರ ಮೇಲೆ ಅಭಿಪ್ರಾಯಗಳನ್ನು ಪಡೆಯುವ ಸಲುವಾಗಿ ಸದಸ್ಯರಿಗೆ ಕಳುಹಿಸತಕ್ಕುದೆಂದು ತಿದ್ದುಪಡಿಯನ್ನು ಮಂಡಿಸಬಹುದು.

ಶ್ರೀ ಬಿ.ಎಸ್. ಯಡಿಯೂರಪ್ಪ:– ತಾವು ಓದಿದ ನಿಯಮದ ಪ್ರಕಾರ ಭಿನ್ನಾಭಿಪ್ರಾಯವಿಲ್ಲ. ಆದರೆ ನಾನು ಏನು ಹೇಳುತ್ತಿದ್ದೇನೆಂದರೆ, ನಾವು ಮಾಡಿಕೊಂಡ ನಿಯಮಾವಳಿ ಪ್ರಕಾರ, ಅವರನ್ನು ಅಬ್ಜೆಕ್ಟ್ ಮಾಡುವುದಕ್ಕೆ ಬರುವುದಿಲ್ಲ. ಅವರು ಕಾನೂನು ಚೌಕಟ್ಟಿನಲ್ಲಿ ಕೆಲಸ ಮಾಡಿದ್ದಾರೆ. ಮಾನ್ಯ ಸಭಾನಾಯಕರು

ಈ ಬಿಲ್ಲಿಗೆ ತಿದ್ದುಪಡಿಯನ್ನು ತರುವ ಸಂದರ್ಭದಲ್ಲಿ ಎಲ್ಲರ ಅಭಿಪ್ರಾಯ ತೆಗೆದುಕೊಂಡು ಜನರ ಹಿತವನ್ನು ಕಾಪಾಡಬೇಕೆಂದರೆ ಅವರು ಬಿಲ್ಲನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಅವಕಾಶ ಇದೆ. ಅವರು ಬಿಲ್ಲನ್ನು ವಾಪಸ್ಸು ತೆಗೆದುಕೊಂಡು ವಿರೋಧ ಪಕ್ಷದವರ ಜೊತೆ ಚರ್ಚೆ ಮಾಡಿ ಎಲ್ಲರಿಗೂ ಅನುಕೂಲವಾಗುವಂತಹ ತಿದ್ದುಪಡಿ ತರಬೇಕೆಂದು ತಮ್ಮ ಮೂಲಕ ವಿನಂತಿಸಿಕೊಳ್ಳುತ್ತೇನೆ. ಅದಕ್ಕೆ ಅಡ್ಡಿ ಆತಂಕ ಏನೂ ಇಲ್ಲ. ಬಿಲ್ಲನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ನಮ್ಮದೇನು ಅಡ್ಡಿ ಇಲ್ಲ. ನಾವು ಸಂಪೂರ್ಣವಾಗಿ ಸಹಕಾರ ಕೊಡುತ್ತೇವೆ. ದಯಮಾಡಿ ಬಿಲ್ಲನ್ನು ವಾಪಸ್ಸು ತೆಗೆದುಕೊಳ್ಳಬೇಕು. ಎಲ್ಲಾ ಮತ್ತೆ ವಿರೋಧ ಪಕ್ಷದವರ ಜೊತೆ ಚರ್ಚೆ ಮಾಡಿ ಆಗತ್ಯವಿರುವ ತಿದ್ದುಪಡಿ ತರುವುದಕ್ಕೆ ನಾವು ಪೂರ್ಣ ಸಹಕಾರ ನೀಡುತ್ತೇವೆ. ಮಾನ್ಯ ಸಭಾನಾಯಕರು ಒಂದು ತೀರ್ಮಾನ ತೆಗೆದುಕೊಂಡು ಕರ್ನಾಟಕ ರಾಜ್ಯದ ವಿಧಾನ ಸಭೆಯ ಇತಿಹಾಸದಲ್ಲಿ ವಿರೋಧ ಪಕ್ಷದ ನಾಯಕರ ಮಾತಿಗೆ ಬೆಲೆ ಕೊಟ್ಟರು ಎಂಬ ಹೊಸ ದಾಖಲೆಯನ್ನು ನಿರ್ಮಾಣ ಮಾಡಬೇಕೆಂದು ನಾನು ವಿನಂತಿಸುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್:– ಮಾನ್ಯ ಅಧ್ಯಕ್ಷರೇ, ಯಾವಾಗಲೂ ಕೂಡ ಆಡಳಿತ ಪಕ್ಷ ಒಂದು ಬಿಲ್ಲನ್ನು ತರುವಾಗ ಪೂರ್ವಭಾವಿಯಾಗಿ ವಿರೋಧ ಪಕ್ಷದವರನ್ನು ಕರೆಸಿ ಕೇಳಿ ಸಮಲೋಚನೆ ಮಾಡಿ, ಎಲ್ಲಿ ಕಾಮ ಹಾಕಬೇಕು, ಎಲ್ಲಿ ಫುಲ್‌ಸ್ಟಾಪ್ ಹಾಕಬೇಕು, ಯಾವ ಕ್ಲಾಜ್, ಫ್ರೇಜ್ ಇರಬೇಕೆಂದು ಪರಿಶೀಲಿಸಿ ತರುವುದಿಲ್ಲ. ತಮಗೆ ತಿಳಿದ ಹಾಗೆ ತಮ್ಮ ಪಕ್ಷದಲ್ಲಿ ವಿಚಾರಣೆ ಮಾಡಿ ತರುತ್ತಾರೆ. ಆ ರೀತಿ ಇವತ್ತು ತಂದು ಆಗಿದೆ. ಶ್ರೀ ಯಡಿಯೂರಪ್ಪನವರು ಬಹಳ ಉತ್ತಮವಾದ ಸಲಹೆಯನ್ನು ನೀಡಿ, ಸಭಾನಾಯಕರು ಮತ್ತು ಮಂತ್ರಿವರ್ಯರು ವಿರೋಧ ಪಕ್ಷದವರ ಜೊತೆ ಸಮಾಲೋಚನೆ ಮಾಡಿ ಎಂದು ಹೇಳಿದರು ಮತ್ತೆ ಮುಖ್ಯ ಮಂತ್ರಿಯವರಿಗೆ ಸಲಹೆ ಮಾಡಿ ಏನು ಹೇಳಿದರೆಂದರೆ, ಮಸೂದೆಯನ್ನು ವಾಪಸ್ಸು ತೆಗೆದುಕೊಂಡು ಮತ್ತೆ ಇನ್ನೊಂದು ಸಾರಿ ತನ್ನಿ ಅಂದರು. ಅದು ಸಾಧುವಾದುದಲ್ಲ. ಪ್ರಜಾಪ್ರಭುತ್ವದಲ್ಲಿ, ಪಾರ್ಟಿ ಸಿಸ್ಟಂ ಆಫ್ ಗವರ್ನಮೆಂಟಿನಲ್ಲಿ ಹಾಗೆ ಮಾಡತಕ್ಕದ್ದು ಅಲ್ಲ. ನಮಗೆ ಏನು ತಿಳಿಯುತ್ತದೆ, ಅದನ್ನು ಪೂರ್ವಭಾವಿಯಾಗಿ ಯೋಚನೆ ಮಾಡಿ ತಂದಿದ್ದೇವೆ. ಈಗ ತಂದಿರತಕ್ಕ ಬಿಲ್ಲು ತಮಗೆ ಸಮಂಜಸವಾಗದೆ ಇರಬಹುದು. ಅದಕ್ಕೆ ಬೆಳಿಗ್ಗೆ ರಾಮಕೃಷ್ಣ ಹೆಗಡೆಯವರು ಒಂದು ಮಾತು ಹೇಳಿದರು. ಮಾನ್ಯ ಸಭಾನಾಯಕರಿಗೆ ಮತ್ತು ಮಂತ್ರಿವರ್ಯರಿಗೆ ಸಾಕಷ್ಟು ಸಮಯ ಇತ್ತು. ಅವರು ಕಾರ್ಯಕಲಾಪಗಳ ಸಲಹಾ ಸಮಿತಿಯನ್ನು ಕರೆದು ಕಾಲವನ್ನು ನಿಗದಿ ಮಾಡಬೇಕಾಗಿತ್ತು ಅಂದರು. ಅದಕ್ಕೆ ಈಗ ಸಮಯ ಇಲ್ಲ. ಈಗ ತಮ್ಮ ಸಲಹೆ ಏನಿದೆ ಅದಕ್ಕೆ ಸಭಾನಾಯಕರು ಸ್ಪಂಧಿಸಿದರೆ ಒಳ್ಳೆಯದು; ಅವರು ಕರೆದು ಮಾತನಾಡತಕ್ಕದ್ದು ಸೂಕ್ತ. ಆದರೆ ಯಡಿಯೂರಪ್ಪನವರ ಸಲಹೆ ಏನಿದೆ ಅದು ಅನಿಶ್ಚಿತವಾಗಿದೆ. ವಾಪಸ್ಸು ತೆಗೆದುಕೊಂಡು ಹೋಗಿ ಕೇಳಿ ಮಾಡಿಬರುವುದು ಅಂದರೆ, ನಮ್ಮಲ್ಲಿ ಒಂದು ಗಾದೆ ಹೇಳುತ್ತಾರೆ, "ಕೋಳಿ ಕೇಳಿ ಸಂಬಾರ ಅರೆಯುವುದೇ" ಎಂದು. ಆ ರೀತಿ ಆಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಹಾಗಿದ್ದರೆ ನಾನು ಬೇರೆ ಒಂದು ಒಳ್ಳೆಯ ಸಲಹೆ ಕೊಡುತ್ತೇನೆ.

(ಗೊಂದಲ)

ಶ್ರೀ ಕೆ.ಎಚ್. ರಂಗನಾಥ್:– ಆಗುವುದಿಲ್ಲ ಸ್ವಾಮಿ, ಕೇಳಿ. ಪಾರ್ಟಿ ಸಿಸ್ಟಂ ಆಫ್ ಗೌರ್ನಮೆಂಟ್‌ನಲ್ಲಿ ಆದಾಗುವುದಿಲ್ಲ. ಆದ್ದರಿಂದ ತಮ್ಮ ಸಲಹೆ ಬಹಳ ಸೂಕ್ತವಾಗಿದೆ. ಮಾನ್ಯ ಸಭಾ ನಾಯಕರು ಅದನ್ನು ಪರಿಶೀಲನೆ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ:– ಅಧ್ಯಕ್ಷರೆ, ಮಾನ್ಯ ಯಡಿಯೂರಪ್ಪನವರು ಹೇಳಿದ ಸಲಹೆಗಳನ್ನು ಕೇಳಿದರೆ ಚರ್ಚೆ ಇಲ್ಲಿಗೇ ಅಖೈರು, ರಾಜೆ ಆಗುವಹಾಗಿಲ್ಲ, ಎದ್ದು ಹೋಗಬೇಕು ಎಂದು ಕಡೆಯ ಮಾತು ಹೇಳಿದಹಾಗಿದೆ. ತಾವು ಸೂಕ್ತ ಸಲಹೆ ಕೊಟ್ಟಿದ್ದೀರಿ. ಕುಳಿತುಕೊಂಡು ಚರ್ಚೆ ಮಾಡೋಣ. ಚರ್ಚೆ ಮಾಡುವುದರ ಮುಖಾಂತರ ಯಾವಯಾವ ಅಂಶಗಳನ್ನು ಅಲ್ಪಸ್ವಲ್ಪ ಬದಲಾವಣೆ ಮಾಡುವುದಕ್ಕೆ ಸಾಧ್ಯವೆ ಎಂಬುದನ್ನು ಸಮಾಲೋಚನೆ ಮಾಡೋಣ ಎಂದರೆ ಅದಕ್ಕೆ ಅವರು ಇಲ್ಲ ಎಂದು ಹೇಳುತ್ತಾರೆ. ತಾವು ಹೇಳಿದಹಾಗೆ ಕುಳಿತುಕೊಂಡು ಚರ್ಚೆ ಮಾಡೋಣ. ಎಲ್ಲರೂ ಅವರವರ ಸ್ಥಾನದಲ್ಲಿ ಕುಳಿತು ಚರ್ಚೆ ಪ್ರಾರಂಭ ಮಾಡಲಿ, ಚರ್ಚೆ ನಡೆದರೆ ಒಂದು ದಿವಸ ಆಗಬಹುದು, ಎರಡು ದಿವಸ ಆಗಬಹುದು, ಚರ್ಚೆ ಆದಮೇಲೆ ಒಂದು ತೀರ್ಮಾನಕ್ಕೆ

ಬರೋಣ ಎಂದು ತಾವು ಹೇಳಿದ ಸಲಹೆಯನ್ನು ಪ್ರತಿ ಪಕ್ಷದ ನಾಯಕರು ಮತ್ತು ಸದಸ್ಯರು ಒಪ್ಪಿಕೊಳ್ಳಬೇಕು ಎಂದು ನನ್ನ ಸಲಹೆ.

ಅಧ್ಯಕ್ಷರು:– ಪ್ರೊಫೆಸರ್ ನಂಜುಂಡಸ್ವಾಮಿ ಅವರು.

† ಪ್ರೊ : ಎಂ.ಡಿ. ನಂಜುಂಡಸ್ವಾಮಿ:– ಸನ್ಮಾನ್ಯ ಸಭಾಧ್ಯಕ್ಷರೆ, ನಾನು ಬೆಳಗ್ಗೆಯಿಂದ ಸುಮ್ಮನೆ ಕುಳಿತಿದ್ದೇನೆ. ಈಗ ನಾನು ಏನು ಹೇಳುತ್ತೇನೆ, ಅದರಿಂದ ವಿರೋಧ ಪಕ್ಷದ ನಮ್ಮ ಸದಸ್ಯರು ಅವರನ್ನು ವಿರೋಧ ಮಾಡುತ್ತೇನೆ ಎಂತಲೂ ತಿಳಿಯಬಾರದು. ನಾನು ಹೇಳುವುದರ ಮೂಲಕ ಆಡಳಿತ ಪಕ್ಷದ ಸದಸ್ಯರು ಅವರಿಗೆ ಬೆಂಬಲ ಕೊಡುತ್ತೇನೆ ಎಂತಲೂ ತಿಳಿಯಬಾರದು. ಏಕೆಂದರೆ ಹಿಂದಿನ ಜನತಾ ದಳ ಸರ್ಕಾರ ಮಾಡಿದ ಮಸೂದೆಯಲ್ಲಿ ಹಲವಾರು ದೋಷಗಳಿದ್ದವು, ಇವೆ; ಅದರಿಂದ ನಮ್ಮ ಕೆಳಮಟ್ಟದ ಘಟಕಗಳು ಬಹಳ ಕೆಟ್ಟಿವೆ. ಅದನ್ನು ಯಾರೂ ಅಲ್ಲಗಳೆಯುವುದಕ್ಕಾಗುವುದಿಲ್ಲ. ಅದನ್ನೆಲ್ಲಾ ಈಗ ಸರಿಪಡಿಸಬೇಕು. ಅದರ ಜೊತೆಗೆ ಈ ತಿದ್ದುಪಡಿಯಲ್ಲಿ ಕೂಡ ಬಹಳ ದೋಷಗಳಿವೆ. ಅದನ್ನು ಚರ್ಚೆಮಾಡಬೇಕು. ಏತಕ್ಕೆ ಇದನ್ನು ಪೀಠಿಕೆಯಾಗಿ ಹೇಳಿದೆ ಎಂದರೆ, ನನಗೆ ಗೊತ್ತಿದೆ, ಯಾವುದೇ ಸರ್ಕಾರ ಅದು ಮಂಡಿಸಿದ ಮಸೂದೆಯನ್ನು ವಾಪಸ್ ತೆಗೆದುಕೊಳ್ಳುವುದಿಲ್ಲ. ಆ ಕಾರಣಕ್ಕೆ ತಾವು ಏನು ಸೂಚನೆ ಕೊಟ್ಟಿದ್ದೀರಿ, ಅಂದರೆ ಎಲ್ಲ ವಿರೋಧಪಕ್ಷದವರು ಮತ್ತು ಆಡಳಿತ ಪಕ್ಷದವರು ಒಂದು ಕಡೆ ಕುಳಿತು, ಬೇರೆ ಕಡೆ ಮಾತನಾಡಿ ನಂತರ ಚರ್ಚೆ ಪ್ರಾರಂಭ ಮಾಡೋಣ ಎಂದು, ಅದರ ಅವಶ್ಯಕತೆಯೂ ನನಗೆ ಕಾಣಿಸುತ್ತಿಲ್ಲ. ಏಕೆಂದರೆ ಅವರಂತೂ ವಾಪಸ್ ತೆಗೆದುಕೊಳ್ಳುವುದಿಲ್ಲ. ಚರ್ಚೆಯಂತೂ ಇಲ್ಲಿ ಮಾಡಲೇಬೇಕು. ಬೇರೆ ಒಂದು ಕೋಣೆಯಲ್ಲಿ ಮಾಡಿ ಏನು ಪ್ರಯೋಜನ? ಅದನ್ನು ಇಲ್ಲೇ ಮಾಡೋಣ ಎಂದು ನನ್ನ ಸಲಹೆ.

Sri Qamarulislam:- Mr. Speaker Sir, this is a very important Amendment Bill concerning Zilla Parishads and Mandal Panchayats. As Mr. Ranganathji rightly pointed out, we are having democratic party system and however democratically we conduct the proceedings here, there will be differences of opinion. At this juncture, when the Bill is introduced, opposing the Bill is not a good thing for democracy. Changes could be made even after the discussion and suggestions could be given after even at the stage of duscussion. There could be an Advisory Committee and even if the House consents, the Bill can be referred to the Select Committee after the discussion is over. Just requesting to take back the Bill or requesting at this stage to refer to a Joint Select committee, Personally I feel is not proper. I request that the discussion may be started as you have suggested. I support your kind suggestion that there may be a meeting amongst the Opposition Leaders and the Hon'ble Chief Minister on this subject.

6.30 ಪಿ.ಎಂ

† ಶ್ರೀ ಕೆ.ಎಸ್. ಈಶ್ವರಪ್ಪ:– ಮಾನ್ಯ ಅಧ್ಯಕ್ಷರೇ, ಹಿಂದೆ ಲೋಕಸಭೆಯಲ್ಲಿ ಹಾಗೂ ಕೆಲವು ವಿಧಾನಸಭೆಗಳಲ್ಲಿ ಇಂತಹ ಬಿಲ್‌ಗಳು ಬಂದಾಗ ಅನೇಕ ಸಾರಿ ವಾಪಸ್ಸು ತೆಗೆದುಕೊಂಡಂತಹ ಪ್ರಕರಣಗಳು ಇವೆ. ಆದರೆ ಜನತೆಗೆ ತುಂಬಾ ಅನುಕೂಲವಾಗುತ್ತದೆನ್ನುವ ರೀತಿಯಲ್ಲಿ ಈ ತಿದ್ದುಪಡಿಯನ್ನು ಸರ್ಕಾರ ಇಡುವ ಸಮಯದಲ್ಲಿ ಚುನಾವಣಾ ಪ್ರಣಾಳಿಕೆಯಲ್ಲಿ ಈ ಬಗ್ಗೆ ಹೇಳಿರಲಿಲ್ಲ. ಆದುದರಿಂದ ವಿಧಾನಸಭೆಯನ್ನು ಡಿಸಾಲ್ವ್ ಮಾಡಿ, ನಾವು ಜನತೆಯ ಮುಂದೆ ಹೋಗೋಣ. ಅವರು ಇದನ್ನು ಮಾಡಬೇಕೆಂದು ತೀರ್ಪುಕೊಟ್ಟರೆ ಆಗ ಮಾಡೋಣ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ (ಮಾನ್ಯ ಮುಖ್ಯಮಂತ್ರಿಗಳು):– ಮಾನ್ಯ ಸಭಾಧ್ಯಕ್ಷರೇ, ನಾವು ಜಿಲ್ಲಾ ಪರಿಷತ್ತು ಮತ್ತು ಮಂಡಲಪಂಚಾಯಿತಿ ಕಾನೂನಿಗೆ ನಮ್ಮ ಅನಿಸಿಕೆಗಳ ಹಿನ್ನೆಲೆಯಲ್ಲಿ, ಆಡಳಿತದ ಅನುಭವದ

ಹಿನ್ನೆಲೆಯಲ್ಲಿ, ಜನರ ಅಭಿಪ್ರಾಯದ ಹಿನ್ನೆಲೆಯಲ್ಲಿ ಕೆಲವು ತಿದ್ದುಪಡಿಗಳನ್ನು ತರಬೇಕೆನ್ನುವ ವಿಚಾರವನ್ನು ಸರ್ಕಾರ ಇಲ್ಲಿ ಮಾಡಿದೆ. ಸಹಜವಾಗಿರತಕ್ಕಂಥ ಒಂದು, ನಮ್ಮ ವ್ಯವಸ್ಥೆಗೆ ಈ ಒಂದು ಪ್ರಯತ್ನ. ಈ ಒಂದು ಪ್ರಯತ್ನ ವಿನೂತನವಾದ ಪ್ರಯತ್ನವೇನೂ ಅಲ್ಲ. ಯಾವುದೇ ಒಂದು ಪಕ್ಷ ಅಧಿಕಾರದಲ್ಲಿ ಇದ್ದಾಗ ಒಂದು ವಾದವನ್ನು ಜಾರಿಗೆ ಕೊಟ್ಟು ಅದರ ಪ್ರತಿಫಲವನ್ನು ಜನರಿಗೆ ನೀಡಬೇಕೆನ್ನುವ ಒಂದು ಸದುದ್ದೇಶ ಇದ್ದಾಗ ಈಗಿರತಕ್ಕ ಕಾನೂನು ಚೌಕಟ್ಟಿನಲ್ಲಿ ಯಾವ ಪ್ರತಿಫಲ ಜನತೆಗೆ ತಲುಪಬೇಕೆಂದು ನಮ್ಮ ನಿರೀಕ್ಷೆ ಇರುತ್ತದೆಯೋ ಆ ನಿರೀಕ್ಷೆಗೆ ತಕ್ಕ ಹಾಗೆ ಪ್ರತಿಫಲ ತಲುಪದೇ ಇದ್ದರೆ, ಅದನ್ನು ತಲುಪಿಸತಕ್ಕ ಜವಾಬ್ದಾರಿಯನ್ನು ಆಡಳಿತ ನಡೆಸತಕ್ಕ ಪಕ್ಷ ಅಥವಾ ಸರ್ಕಾರ ಹೊರಬೇಕಾಗುತ್ತದೆ. ಅದಕ್ಕೆ ಅನುಗುಣವಾಗಿ ಈ ಒಂದು ಪ್ರಯತ್ನ. ಮಸೂದೆಯ ವಿವರಕ್ಕೆ ಹೋಗುವ ಕಾಲ ಇದಲ್ಲ. ನನ್ನ ಮಾತಿನ ಇತಿಮಿತಿಯನ್ನು ಅರಿತು ನಾನು ಮಾತನಾಡುತ್ತಿದ್ದೇನೆ. ಸಾಂದರ್ಭಿಕವಾಗಿ ವಿಚಾರ ಪ್ರಸ್ತಾಪ ಆಗಿರುವುದರಿಂದ ನಾನೂ ಕೂಡ ಒಂದೊಂದು ಮಾತನ್ನೂ ಇಲ್ಲಿ ಸಾಂದರ್ಭಿಕವಾಗಿ ಇಡುತ್ತಿದ್ದೇನೆ. ಈಗ ಈ ಒಂದು ತಿದ್ದುಪಡಿ ಮಸೂದೆ ಮಂಡನೆಯಾಗಿದೆ. ತಾವೇ ಹೇಳಿದಹಾಗೆ ಚರ್ಚೆ ಆಗುವುದಕ್ಕೆ ರಾಜ್ಯಾಂಗಬದ್ಧವಾಗಿ ಕೆಲವು ಹಂತಗಳು ಇವೆ. ಮಂಡನೆ ಆದಮೇಲೆ, ಕನ್ಸಿಡರೇಷನ್, ಪಾಸಿಂಗ್ ಸ್ಟೇಜ್‌ಗಳು ಇವೆ. ಈಗ ನಾವು ಯಾವ ವಿಚಾರವನ್ನು ಇಟ್ಟು ಈ ಒಂದು ಕಾನೂನನ್ನು ತಂದಿದ್ದೇವೆ? ನಿಜ ಹೇಳಬೇಕೆಂದರೆ ಅಧಿಕಾರ ವಿಕೇಂದ್ರೀಕರಣವನ್ನು ಸಹಜವಾಗಿ ಎಲ್ಲರೂ ಒಪ್ಪತಕ್ಕ ವಾದ. ಇದನ್ನು ಎಲ್ಲ ಪಕ್ಷದವರೂ ಒಪ್ಪಿದ್ದಾರೆ. ನಮ್ಮ ಪಕ್ಷ ಕೇಂದ್ರದಲ್ಲಿ ಅಧಿಕಾರದಲ್ಲಿ ಇದ್ದಾಗ ರಾಜ್ಯಾಂಗಕ್ಕೆ ತಿದ್ದುಪಡಿ ತರತಕ್ಕ ವಿಚಾರವನ್ನೂ ಸಹ ನಾವು ಮಾಡಿದ್ದೇವೆ. ಇದರ ಬಗ್ಗೆ ಯಾವುದೇ ಭಿನ್ನಾಭಿಪ್ರಾಯ ಇಲ್ಲ. ಸುಮಾರಾಗಿ ಆ ದಾಟಿಯಲ್ಲಿ ಈ ಪ್ರಯೋಗಗಳು ರಾಷ್ಟ್ರದಾದ್ಯಂತ ಆಯಾ ರಾಜ್ಯಗಳಲ್ಲಿ ಅವರ ಚಿಂತನೆಗೆ, ಅಲ್ಲಿರತಕ್ಕ ಸಾಮಾಜಿಕ ವ್ಯವಸ್ಥೆಗೆ ಸರಿಹೊಂದತಕ್ಕ ವಿಚಾರಧಾರೆಗೆ ಅನುಗುಣವಾಗಿ ಇಂತಹ ಪ್ರಯೋಗಗಳನ್ನು ಕಾನೂನು ಚೌಕಟ್ಟಿನಲ್ಲಿ ಪ್ರಯತ್ನ ಮಾಡುತ್ತಾ ಬಂದಿದ್ದಾರೆ. ನಾನಾದರೂ ಕೂಡಾ ಈ ಸಂದರ್ಭದಲ್ಲಿ ಒಂದು ವಿಚಾರ ಮಾಡುತ್ತೇನೆ.

ಈ ಜಿಲ್ಲಾಪರಿಷತ್ ಮತ್ತು ಮಂಡಲಪಂಚಾಯಿತಿ ಮಸೂದೆ ಮೊದಲು ಮಂಡನೆಗೆ ಬಂದಾಗ ಶ್ರೀಮಾನ್ ರಾಮಕೃಷ್ಣಹೆಗಡೆಯವರ ಸರ್ಕಾರ ಇಲ್ಲಿದ್ದಾಗ ನಿಜ ಹೇಳಬೇಕಾದರೆ, ನಾವೆಲ್ಲ ಒಪ್ಪಿದ್ದೇವೆ. ಏಕೆಂದರೆ ಇದೊಂದು ಪ್ರಯೋಗ ನಮ್ಮ ಪಕ್ಷದ ಚಿಂತನೆ ಇದ್ದಂತೆ ಈವೊಂದು ಪ್ರಯೋಗ ನಡೆಯಲಿ ಎನ್ನುವ ಹಿನ್ನೆಲೆಯಲ್ಲಿ ನಾವು ಒಪ್ಪಿದ್ದೇವೆ. ನಾವು ಆ ಸಂದರ್ಭದಲ್ಲಿ ಮನಃ ಪೂರ್ವಕವಾಗಿ ಆಪಾದಮಸ್ತಕವಾಗಿ ಅಥವಾ ಆಡಿಯಿಂದ ಮುಡಿಯವರೆಗೆ ಒಪ್ಪಿದ್ದೇವೆನ್ನುವ ಅರ್ಥವಲ್ಲ. ನಾನು ಆ ಸಂದರ್ಭದಲ್ಲಿ ಆಡಿರತಕ್ಕ ಮಾತುಗಳನ್ನು ಆ ಭಾಷಣವನ್ನು ತಾವು ರೆಕಾರ್ಡ್ ತೆಗೆದು ಕೊಂಡು ನೋಡಬಹುದು. ನಾನು ಉದಾಹರಣೆಗೆ ಸುಮ್ಮನೆ ಹೇಳುತ್ತಿದ್ದೇನೆ, ನಾನು ವಿವರಗಳಿಗೆ ಹೋಗುವುದಿಲ್ಲ. 10–15 ಗ್ರಾಮಗಳು, ಇಷ್ಟೊಂದು ಜನಸಂಖ್ಯೆ ಇದ್ದರೆ ಅದು ಅನ್‌ವಿಲ್ಡಿ ಆಗುತ್ತದೆ.....

(ಬಾವಿಯೊಳಗಿದ್ದ ಜನತಾದಳದ ಸದಸ್ಯರು ಮಾತನಾಡುತ್ತಿದ್ದರು)

ಮಾನ್ಯ ಗುರುಪಾದಪ್ಪನವರೇ ಏತಕ್ಕೆ ವಿವರಣೆ ಕೊಡುತ್ತಿದ್ದೇನೆಂದರೆ, ಈ ರೀತಿ ಮಾಡಿದರೆ ಅಧಿಕಾರ ವಿಕೇಂದ್ರೀಕರಣವಾಗುವುದಿಲ್ಲ ಕೇಂದ್ರೀಕರಣದ ವಾದ ಆಗುತ್ತದೆ ಎನ್ನುವ ಅಭಿಪ್ರಾಯ ಇಟ್ಟು ಮಾತನಾಡಿದ್ದೇನೆ. ಈ ಸಂದರ್ಭದಲ್ಲಿ ಇದೊಂದು ಪ್ರಯೋಗವೆಂದು ನೀವು ಹೇಳಿದ್ದೀರಿ. ದಿವಂಗತ ನಜೀರ್‌ಸಾಬ್‌ರವರು ಈಗ ನಮ್ಮ ಮಧ್ಯೆ ಇಲ್ಲ. ಅವರು ಆಡಿರತಕ್ಕ ಮಾತು ಕಡತದಲ್ಲಿದೆ. ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದಾಗ ಹೇಳಿರತಕ್ಕ ಮಾತುಗಳು ಕೂಡ ಕಡತದಲ್ಲಿವೆ. ಅವರು ಏನು ಹೇಳಿದ್ದಾರೆ ಇದೊಂದು ಪ್ರಯೋಗವನ್ನು ನಾವು ಮಾಡುತ್ತಿದ್ದೇವೆಂದು ಹೇಳಿದ್ದಾರೆ. ನಾನು ಅದಕ್ಕಾಗಿ ಈ ಉದಾಹರಣೆಯನ್ನು ಕೊಟ್ಟೆ ಈವೊಂದು ಪ್ರಯೋಗದಲ್ಲಿ ಹೆಚ್ಚು ಕಡಿಮೆಯಾಗಬಹುದು, ಒಪ್ಪು ನೆಪ್ಪು ಬರಬಹುದೆಂದು ಅವರು ಆಡಿರತಕ್ಕ ಮಾತುಗಳು ಅಷ್ಟೂ ದಾಖಲೆಯಲ್ಲಿವೆ. ಈ ಪ್ರಯೋಗವನ್ನು ಮಾಡುತ್ತಿದ್ದೇವೆ ಎನ್ನುವ ಮಾತನ್ನು ಆಡಿದಾಗ ಅಧಿಕಾರ ವಿಕೇಂದ್ರೀಕರಣದ ವಾದಕ್ಕೆ ಒಪ್ಪಿಗೆ ಮತ್ತು ಪುಷ್ಠಿ ಕೊಡತಕ್ಕ ದೃಷ್ಟಿಯಿಂದ ನಾವೆಲ್ಲರೂ ಸೇರಿ ಒಪ್ಪಿಗೆ ಕೊಟ್ಟಿದ್ದೇವೆ. ಆ ಸಂದರ್ಭದಲ್ಲಿ

ನಾವು ಧರಣಿ ಮಾಡಲಿಲ್ಲ. ಅದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇವೊತ್ತು ನಾವು ಮಾಡಿರತಕ್ಕದ್ದು ಇದು ವೇದವಾಕ್ಯ ಬಹಳ ಹೈಕ್ಲಾಸ್ ಎಂದಲ್ಲ. ಪ್ರಯೋಗ ಮಾಡತಕ್ಕ ಕಾಲದಲ್ಲಿ, ಈ ಅಧಿಕಾರವನ್ನು ಜಾರಿ ಮಾಡತಕ್ಕ ಕಾಲದಲ್ಲಿ ಒಂದು ವೇಳೆ ಏನಾದರೂ ಮಾಡಿದರೆ ಆಡಳಿತ ಕ್ಷೇತ್ರದಲ್ಲಿ ಕಾನೂನುಕಕ್ಷೆಯಲ್ಲಿ ಜಾರಿಗೆ ಕೊಟ್ಟಾಗ ಸಹಜವಾಗಿ ಅಲ್ಲೂ ಕೂಡ ವ್ಯತ್ಯಾಸ ಬರಬಹುದು, ಎನ್ನುವ ಅನಿಸಿಕೆ ತಮಗೆ ಹೇಗೆ ಇದೆಯೋ ಹಾಗೆ ಈವೊಂದು ತಿದ್ದುಪಡಿ ಪಾಸಾದ ಮೇಲೆ ಸಹಜವಾಗಿ ನಮಗೂ ನಿಮಗೂ ಬರತಕ್ಕ ಸಂದರ್ಭಗಳಿವೆ.

(ಭಾವಿಯೊಳಗಿದ್ದ ಜನತಾದಳದ ಹಲವಾರು ಸದಸ್ಯರು ಕುಳಿತು ಮಾತನಾಡುತ್ತಿದ್ದರು)

ಮಾನ್ಯ ಗುರುಪಾದಪ್ಪ ನವರೇ ಸ್ವಲ್ಪ ದಯಮಾಡಿ ಕುಳಿತುಕೊಳ್ಳಿ. ಈಗ ಗುರುಪಾದಪ್ಪನವರಿಗೆ ಚೇರುವುದಕ್ಕೆ ಬರುವುದಿಲ್ಲ, ಗುಡುಗುವುದಕ್ಕೆ ಬರುತ್ತದೆ. ಒಬ್ಬೊಬ್ಬರಿಗೆ ಒಂದೊಂದು ರೀತಿ ಇರುತ್ತದೆ. ಅವರ ಅಭಿಪ್ರಾಯ ನನಗೆ ಅರ್ಥವಾಗಿದೆ. ಆದ್ದರಿಂದ ತಮ್ಮ ಮುಖಾಂತರ ಸದನದ ಗಮನಕ್ಕೆ ಮಾನ್ಯ ವಿರೋಧಪಕ್ಷದನಾಯಕರು, ವಿರೋಧ ಪಕ್ಷದ ಉಪನಾಯಕರ ಹಾಗೂ ಎಲ್ಲ ಮಿತ್ರರ ಗಮನಕ್ಕೆ ತರುತ್ತಿದ್ದೇನೆ. ಪ್ರಯೋಗಾವಸ್ಥೆಯಲ್ಲಿ ನಾವು ಇದ್ದಾಗ ಇದೂ ಕೂಡ ಒಂದು ಪ್ರಯೋಗದ ದೃಷ್ಟಿಯಿಂದ, ನಾವು ಹೇಗೆ ಸ್ವೀಕಾರ ಮಾಡಿದ್ದೇವೆ ಹಾಗೆಯೇ ನೀವು ಕೂಡ ಸ್ವೀಕಾರ ಮಾಡುತ್ತೀರಿ ಅನ್ನತಕ್ಕ ಒಂದು ಸದ್ಭಿಚ್ಛೆಯಿಂದ ಈ ತಿದ್ದುಪಡಿ ಮಸೂದೆಯನ್ನು ತರುವ ಪ್ರಯತ್ನ ಮಾಡಿದ್ದೇವೆ. ಜಾಯಿಂಟ್ ಸೆಲೆಕ್ಟ್ ಕಮಿಟಿಯ ವಿಚಾರ ಈಗಾಗಲೇ ಪ್ರಸ್ತಾಪ ಮಾಡಿದ್ದಾರೆ. ನಾನು ಮತ್ತೆ ಅದರ ವ್ಯಾಖ್ಯಾನಕ್ಕೆ ಹೋಗುವುದಿಲ್ಲ. What exactly is the stage at which we can think of sending or entrusting the Amendment Bill to a Joint Select committee? I think this is not the stage. ಕಾನೂನು ಪ್ರಕಾರ ಬರುವಹಾಗೆ ಇಲ್ಲ. ಇಂಟ್ರೋಡಕ್ಷನ್ ಮಾಡತಕ್ಕಂಥ ಸ್ಟೇಜ್‌ನಲ್ಲಿ ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ರೆಫರ್ ಮಾಡುವುದಕ್ಕೆ ಬರುವುದಿಲ್ಲ. ಒಂದು ಮಸೂದೆ ಅದು ಸಂಪೂರ್ಣವಾಗಿ ತಿದ್ದುಪಡಿ ಮಸೂದೆ ಇರಬಹುದು ಅಥವಾ ಮುಖ್ಯವಾದ ಮಸೂದೆ ಇರಬಹುದು. ಚರ್ಚೆ ಕಾಲದಲ್ಲಿ ಅಭಿಪ್ರಾಯಗಳನ್ನು ಕನ್ಸಿಡರೇಶನ್ ಅಂಡ್ ಪಾಸಿಂಗ್ ಬಂದಂಥ ಕಾಲದಲ್ಲಿ ಇಂತಹ ಅಭಿಪ್ರಾಯ ಕೊಡತಕ್ಕದ್ದು ಎಷ್ಟೋಸಾರಿ ನಡೆದಿದೆ, ನಾನು ಇಲ್ಲವೆಂದು ಹೇಳುವುದಿಲ್ಲ. ಇದು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಹೋಗಲಿ ಎಂದು ಹೇಳತಕ್ಕಂಥ ಸಂದರ್ಭಗಳು ಕೂಡ ಇವೆ. ಇಲ್ಲವೆಂದು ನಾನು ಹೇಳುವುದಿಲ್ಲ. ಹಾಗೆ ಬಂದಾಗ ತಾವು ಅಭಿಪ್ರಾಯಗಳನ್ನು ವ್ಯಕ್ತಪಡಿಸಿ ಸರ್ಕಾರ ಅದನ್ನು ಪರಿಗಣಿಸುವುದಕ್ಕೆ, ಸದನ ಅದನ್ನು ಪರಿಗಣಿಸುವುದಕ್ಕೆ ಸಾಧ್ಯವಾಗತಕ್ಕಂಥ ಒಂದು ಸದಂರ್ಭ ಅದು. ಆದರೆ ಅದು ಈ ಸಂದರ್ಭದಲ್ಲಿ ಬರುವುದಿಲ್ಲ ಎಂಬ ಅಭಿಪ್ರಾಯವನ್ನು ಈ ಸಂದರ್ಭದಲ್ಲಿ ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ ಇನ್ನು ವಿರೋಧ ಪಕ್ಷಗಳನ್ನು ಮಾತುಕತೆಗೆ ಆಹ್ವಾನಿಸಬೇಕಾಗಿತ್ತು ಎಂಬುದು. ಅದಕ್ಕೆ ನಮ್ಮ ಹ್ಹಿರಿಯ ಸದಸ್ಯರಾದ ಶ್ರೀ ರಂಗನಾಥ್ ಮತ್ತು ಶ್ರೀ ಕಾಗೋಡು ತಿಮ್ಮಪ್ಪನವರು ಈಗಾಗಲೇ ಉತ್ತರವನ್ನು ಕೊಟ್ಟಿದ್ದಾರೆ. ಇನ್ನೂ ಇಬ್ಬರು ಅಭಿಪ್ರಾಯಗಳನ್ನು ಕೊಟ್ಟಿದ್ದಾರೆ. ಅವರು ಏನು ಹೇಳಿದ್ದಾರೆ? ಯಾವುದೇ ಒಂದು ಕಾನೂನನ್ನು ಮಾಡಬೇಕಾದರೆ ಪ್ರತಿಸಾರಿಯೂ ಕೂಡ ಕರೆದು ಮಾಡತಕ್ಕಂಥ ಪ್ರಯತ್ನವನ್ನು ಯಾರೂ ಮಾಡುವುದಿಲ್ಲ ಅಂತ ಹೇಳಿ; ತಾವು ಕೂಡ ಮಾಡಲಿಲ್ಲ. ನೀವು ಅಧಿಕಾರದಲ್ಲಿದ್ದಾಗ, ಎಷ್ಟು ಕಾನೂನುಗಳನ್ನು ಇಲ್ಲಿ ಇಂಟ್ರೋಡ್ಯೂಸ್ ಮಾಡಿದ್ದೀರಿ?

(ಧರಣಿ ಕುಳಿತಿದ್ದ ಮಾನ್ಯ ಸದಸ್ಯರು ಮಾತನಾಡಲು ಪ್ರಾರಂಭಿಸಿದರು)

(ಗೊಂದಲ)

ಆದ್ದರಿಂದ ಮಾನ್ಯ ಸಭಾಧ್ಯಕ್ಷರೆ, ಸರ್ಕಾರದ ಅನಿಸಿಕೆಗೆ ಬಂದರೆ ಪೂರ್ವಿಭಾವಿಯಾಗಿ ಒಂದು ಮಸೂದೆಯನ್ನು ಈ ಸದನದ ಮುಂದೆ ತಮ್ಮ ಅಪ್ಪಣೆ ಪಡೆದು ಮಂಡನೆ ಮಾಡುವುದಕ್ಕೆ ಮೊದಲೇನೇ ನಾವು ಅವರ ಅಭಿಪ್ರಾಯವನ್ನು ತೆಗೆದುಕೊಳ್ಳಬೇಕು ಎಂದು ಒಂದು ವಿಷಯದ ಬಗ್ಗೆ ನಮ್ಮ ಗಮನ ಹೋದರೆ ನಿಜವಾಗಿಯೂ ಕೂಡ ಅದು ಒಪ್ಪತಕ್ಕ ಮಾತು. ಆದರೆ ನಾವೇನು ತಮ್ಮ ಈ ಮಸೂದೆ ಪಾಸ್ ಆಗತಕ್ಕಂಥ ಕಾಲದಲ್ಲಿ ನಾವು ಸಹಕಾರ ಕೊಟ್ಟು ಆಹ್ವಾನ ಕೊಟ್ಟು ಹೇಗೆ ಸ್ವಾಗತ ಮಾಡಿದ್ದೆವೋ, ಹಾಗೆ ನೀವು ಕೂಡ ಮಾಡಬಹುದು ಎನ್ನುವ ದೃಷ್ಟಿಯಿಂದ ನಿಮ್ಮನ್ನು ಕರೆಯತಕ್ಕಂಥ ಪ್ರಯತ್ನವನ್ನು ನಾವು ಮಾಡಲಿಲ್ಲ. ನಾವು ತಮ್ಮನ್ನು ಕರೆಯಬಾರದು

ಎನ್ನುವ ದೃಷ್ಟಿಯಿಂದ ನಾನು ಮಾತನಾಡುತ್ತಿಲ್ಲ. ಅದರ ಅವಶ್ಯಕತೆ ನಮಗೆ ಬೇಳಲಿಲ್ಲವೆನ್ನತಕ್ಕಂಥ ದೃಷ್ಟಿಯಿಂದ ಸ್ಪಷ್ಟವಾಗಿ ಈ ಮಾತನ್ನು ಅಧ್ಯಕ್ಷರ ಮುಖಾಂತರ ಹೇಳಿದ್ದೇನೆ; ಅನಂತರ ಇದರಿಂದ ಇಲ್ಲಿ ಅಧಿಕಾರ ಮೊಟಕು ಆಗುತ್ತದೆ, ಮತ್ತೊಂದು ಆಗುತ್ತದೆ ಎನ್ನತಕ್ಕಂಥ ವಿಚಾರ ಬಂದಿದೆ. ಇದು ಪುನಃ ಮೆರಿಟ್ಸ್ ಮೇಲೆ ಹೋಗತಕ್ಕಂಥ ವಿಚಾರ. ನಿಜ ಹೇಳಬೇಕೆಂದರೆ, ಇಂತಹ ಸಂದರ್ಭದಲ್ಲಿ ಅಭಿಪ್ರಾಯಗಳು ವ್ಯಕ್ತವಾಗಬೇಕಾದರೆ ಒಂದು ವಾದದ ಪರ ...

(ಧರಣಿ ಕುಳಿತಿದ್ದ ಶ್ರೀ ಆರ್.ವಿ. ದೇಶಪಾಂಡೆಯವರು ಮಾತನಾಡಲು ಪ್ರಾರಂಭಿಸಿದರು)

ಶ್ರೀ ದೇಶಪಾಂಡೆಯವರೇ ನೀವು ಸ್ವಲ್ಪ ತಡೆದುಕೊಳ್ಳಬೇಕು. ಅವರ ಮುಖಾಂತರ ಉತ್ತರ ನಿಮಗೂ ಕೂಡ ತಲುಪುತ್ತದೆ. ಬೇರೆ ಸದಸ್ಯರು ಹೇಳಿರುವ ಪ್ರಶ್ನೆಗಳಿಗೆ ನನ್ನ ಉತ್ತರ ಬೇಡವೆ? ಆದ್ದರಿಂದ ಮಾನ್ಯ ಅಧ್ಯಕ್ಷರೇ, ಈ ಸಂದರ್ಭದಲ್ಲಿ ಅಧಿಕಾರ ಮೊಟಕು ಆಗುತ್ತದೆ, ಮತ್ತೊಂದು ಎಂದು ನಾನು ಮೆರಿಟ್ಸ್‌ಗೆ ಹೋಗುವುದಿಲ್ಲ. ಕನ್ಸಿಡರೇಶನ್, ಪಾಸಿಂಗ್‌ಗೆ ಮಸೂದೆ ಬಂದಾಗ ಆ ವಿಚಾರದ ಬಗ್ಗೆ ನಾವು ವಿವರಣೆ ಕೊಡುತ್ತೇವೆ. ಸಾರ್ವಜನಿಕ ಅಭಿಪ್ರಾಯದ ಬಗ್ಗೆ ಶ್ರೀ ವಾಟಾಳ್ ನಾಗರಾಜ್ ಅವರು ಹೇಳಿದ್ದಾರೆ. ಸಾರ್ವಜನಿಕ ಅಭಿಪ್ರಾಯಕ್ಕೆ ಇದು ಹೋಗತಕ್ಕಂಥ ಅವಶ್ಯಕತೆ ಇಲ್ಲವೆಂದು ನಮ್ಮೆಲ್ಲರ ಅಭಿಪ್ರಾಯ. ನಿಜ ಹೇಳಬೇಕೆಂದರೆ, ಇದನ್ನೂ ಕೂಡ ಕನ್ಸಿಡರೇಶನ್ ಅಂಡ್ ಪಾಸಿಂಗ್‌ಗೆ ಬಂದಾಗ ತಾವು ಇಡಬಹುದು. ಆವಾಗ ಚರ್ಚೆಗೆ ಬಂದಂಥ ಕಾಲದಲ್ಲಿ ಇದನ್ನೂ ಕೂಡ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಇದೆಯೆಂದು ಮತ್ತೊಮ್ಮೆ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಮತ್ತೊಂದು ಮಾತನ್ನು ಶ್ರೀ ಯಡಿಯೂರಪ್ಪನವರು ಹೇಳಿದರು. ಇದು ಸಿ.ಎಂ. ಕುರ್ಚಿಗೆ ಸಂಬಂಧಪಡತಕ್ಕಂಥಾದ್ದು ಎಂದು. ಇದಲ್ಲ; ಜಿಲ್ಲಾ ಪರಿಷತ್ ಆ್ಯಕ್ಟ್‌ನೊಳಗಡೆ ಬರತಕ್ಕಂಥ ಕೆಲವು ಕುರ್ಚಿಗಳು ಇವೆ. ಆ ಕುರ್ಚಿಗಳಿಗೆ ಸಂಬಂಧ ಪಡತಕ್ಕಂಥ ಪ್ರಶ್ನೆ ಇದು.

ಇಷ್ಟು ಮಾತನ್ನು ಹೇಳುತ್ತೇನೆ. ಈ ಸಂದರ್ಭದಲ್ಲಿ ವಿವರಣೆಗೆ ಹೋಗುವುದಿಲ್ಲ. ಮಾನ್ಯ ಸಭಾಧ್ಯಕ್ಷರೇ, ಈ ಸಂದರ್ಭದಲ್ಲಿ ಇವತ್ತು ಮಾತುಕತೆ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ವಿರೋಧ ಪಕ್ಷದ ಮಿತ್ರರಲ್ಲಿ ಕೆಲವರು, ಮಾನ್ಯ ಯಡಿಯೂರಪ್ಪನವರೂ ಹೇಳಿದ್ದಾರೆ, ಬೇರೆಯವರೂ ಕೂಡ ಹೇಳಿದ್ದಾರೆ. ಪ್ರೊಫೆಸರ್ ಅವರ ಅಭಿಪ್ರಾಯ ಕೆಲವು ಒಳ್ಳೆಯದಿದೆ, ಕೆಲವು ಕೆಟ್ಟದ್ದು ಇದೆ. ಅದಕ್ಕೇ ನಾನು ಹೇಳಿದೆ, ಕನ್‌ಸಿಡರೇಷನ್ ಪಾಸಿಂಗ್ ಬಂದಾಗ ಹೇಳುವುದಕ್ಕೆ ಸಾಧ್ಯವಿರತಕ್ಕಂಥ ಸಂದರ್ಭ; Perhaps he may be having those two views. I don't deny that. Consideration and passing ಎಂದು ಹೇಳತಕ್ಕಂಥ ಸ್ಟೇಜ್ ಯಾವಾಗ ಎನ್ನುವುದನ್ನು ಪ್ರೊಫೆಸರ್ ಅವರು ಹೇಳಿದ್ದಾರೆ. ತಾವು ಒಂದು ಮಾತನ್ನು ಹೇಳಿದ್ದೀರಿ; ಮಾತುಕತೆಗೆ ಆಹ್ವಾನ ಮಾಡತಕ್ಕ ವಿಚಾರದಲ್ಲಿ. ಈ ಸಂದರ್ಭದಲ್ಲಿ ಕೂಡ ನಿಜ ಹೇಳಬೇಕೆಂದರೆ, ...

(ಗೊಂದಲ)

ಶ್ರೀ ಸಿ. ಬೈರೇಗೌಡ : ಯಾರೇ ಆಗಲೀ ಈ ಸದನದಲ್ಲಿ ನಿಜ ಹೇಳುವುದಕ್ಕೇ ಬಂದಿರುವುದು. ನಿಜ ಬಿಟ್ಟು ಮತ್ತೆ ಯಾವುದನ್ನೂ ಮಾತನಾಡಬಾರದು ಎಂದು ವಿಧಿಯಲ್ಲೂ ಕೂಡ ಇದೆ. ಇದು ಮುಖ್ಯಮಂತ್ರಿಗಳಿಗೂ ಅನ್ವಯಿಸುತ್ತದೆ, ನಮಗೂ ಅನ್ವಯಿಸುತ್ತದೆ. ನೀವು ನಿಜ ಹೇಳುವುದಕ್ಕೇ ಬಂದಿರುವುದು, ನಿಜ ಹೇಳುವುದಕ್ಕೇ ಆ ಸ್ಥಾನದಲ್ಲಿರುವುದು. ಆದ್ದರಿಂದ ದಯಮಾಡಿ ಇನ್ನು ಮುಂದೆ ಈ ರೀತಿ ಹೇಳುವುದಕ್ಕೆ ಹೋಗಬೇಡಿ.

ಶ್ರೀ ವಾಟಾಳ್ ನಾಗರಾಜ್ : ಅವರು ನಿಜ ಹೇಳಿ, ಹೇಳಿ ಅಭ್ಯಾಸವಾಗಿದೆ. ಯಾವಾಗಲೂ ನಿಜ ಹೇಳಿ ಅಭ್ಯಾಸವಾಗಿದೆ. ಅದಕ್ಕೋಸ್ಕರವೇ, "ನಿಜ ಹೇಳಬೇಕೆಂದರೆ" ...

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಬೇರೇಗೌಡರೇ, ತಮ್ಮ ಗಮನಕ್ಕೆ ತರುವ ಹಾಗಿದ್ದರೆ, ನಾನು ನಿಜ ಹೇಳಬೇಕೆಂದರೆ, ಕೆಲವರಿಗೆ ಆದು ಆಗುವುದಿಲ್ಲ ಕೆಲವರಿಗೆ ನಿಜ ಹೇಳಿದರೆ ಆಗುವುದಿಲ್ಲ ಎಂಬ ದೃಷ್ಟಿಯಿಂದ ಮತ್ತೊಂದು ಸಾರಿ ನೆನಪು ಮಾಡಿಕೊಡುತ್ತೇನೆ. ಮಾನ್ಯ ಸಭಾಧ್ಯಕ್ಷರೇ ತಾವು ಹೇಳಿದ್ದೀರಿ, ತಾವು ಹೇಳಿದ್ದಕ್ಕೆ ಸರ್ಕಾರದವರು ಗೌರವ ಕೊಡುತ್ತೇವೆ. ಮಾತುಕತೆಗೆ ಆಹ್ವಾನ ಮಾಡತಕ್ಕಂಥ ವಿಚಾರದಲ್ಲಿ ಸಂಪೂರ್ಣವಾಗಿ

ತಮ್ಮ ಅಣತಿ ಎಂದು ನಾವು ಅದನ್ನು ಅನುಸರಿಸುತ್ತೇವೆ. ಮಾತುಕತೆಗೆ ವಿರೋಧಪಕ್ಷದ ನಾಯಕರು, ಉಪ ನಾಯಕರು ಮತ್ತು ಬೇರೆ ಬೇರೆ ಪಕ್ಷದ ನಾಯಕರು ಏನಿದ್ದಾರೆ ಅವರನ್ನು ಸರ್ಕಾರದ ವತಿಯಿಂದ ಮಾತುಕತೆಗೆ ಕರೆಯುತ್ತೇವೆ. ನಾಳೆ ಕುಳಿತುಕೊಂಡು ಇದರ ಬಗ್ಗೆ ಮಾತುಕತೆ ಮಾಡೋಣ. ತಾವು ಅಭಿಪ್ರಾಯವನ್ನು ಕೊಡಿ, ಅದನ್ನು ವಿರೋಧ ಕೂಡ ಮಾಡುವುದಿಲ್ಲ. ಈ ಸಂದರ್ಭದಲ್ಲಿ ನಾವು ಮಾತುಕತೆ ಮಾಡುವಂತಾದ್ದು ಒಂದೇ ಒಂದು ನೀತಿಗೆ ಅನುಸರಿಸಿ; ಪ್ರಜಾಸತ್ತೆಯಲ್ಲಿ, MUTUAL dialogue is the best way. ಮಾತುಕತೆ ಆಡಿ ಒಬ್ಬರಿಗೊಬ್ಬರು ಅನುಸರಿಸಿಕೊಂಡು ಹೋಗಬೇಕು.

ಶ್ರೀ ವಾಟಾಳ್ ನಾಗರಾಜ್:– ನೀವು ಷರತ್ತು ಹಾಕಬಾರದು, ಷರತ್ತು ಹಾಕಿದರೆ ಅದು ಪ್ರಯೋಜನವಾಗುವುದಿಲ್ಲ. ಆ ಮೇಲೆ ನೀವು ಮಾತನಾಡುವಾಗ ಷರತ್ತು ಹಾಕಿ; ಈಗಲೇ ಷರತ್ತು ಹಾಕಬೇಡಿ. ಇಂತಾದ್ದಕ್ಕೆ, ಇಷ್ಟು ನಿರ್ದಿಷ್ಟವಾಗಿ ಇರಬೇಕು ಎಂಬ ...

ಶ್ರೀ ಎಸ್. ಬಂಗಾರಪ್ಪ:– ಯಾರು ಷರತ್ತು ಹಾಕಿದ್ದಾರೆ. ನಾನು ನಿರ್ದಿಷ್ಟವಾಗಿ ಎನ್ನುವ ಪದವನ್ನೇ ಉಪಯೋಗಿಸಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಸನ್ಮಾನ್ಯ ಅಧ್ಯಕ್ಷರೇ, ಹಿಂದೆ ಇದೇ ಒಂದು ಇಲಾಖೆಯ ಸಚಿವರಾದ ಫೋರ್ಡೆಯವರು ಮಾತನಾಡಿರುವುದು ರೆಕಾರ್ಡ್‌ನಲ್ಲಿದೆ, ತೆಗೆದು ನೋಡಿ ಈ ಶಾಸನಕ್ಕೆ ತಿದ್ದುಪಡಿ ತರುವಂಥ ಅಗತ್ಯ ಇದೆ; ತಿದ್ದುಪಡಿ ತರುವ ಸಮಯದಲ್ಲಿ ವಿರೋಧಪಕ್ಷದ ನಾಯಕರನ್ನು ಕರೆದು ಸಮಾಲೋಚನೆ ಮಾಡಿ, ನಮ್ಮೆಲ್ಲರ ಅಭಿಪ್ರಾಯ ಪಡೆದು ಸೂಕ್ತವಾದ ತಿದ್ದುಪಡಿಯನ್ನು ತರುತ್ತೇವೆ ಎನ್ನುವ ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಇನ್ನೊಂದು ಸಂಗತಿ ಏನೆಂದರೆ, ಈಗ ಸ್ವಲ್ಪ ಟೈಮ್ ಮತ್ತು ಫಳಿಗೆ ಸರಿ ಇಲ್ಲ. ಸದನವನ್ನು ಮುಂದೂಡಿ, ನಾಳೆ ಎಲ್ಲರೂ ಕುಳಿತುಕೊಂಡು, ಮಾತನಾಡಿ, ಏನಾದರೂ ಪ್ರಯತ್ನ ಮಾಡಿದರೆ, ಒಮ್ಮತಕ್ಕೆ ಬರಬಹುದೆನಿಸುತ್ತದೆ. ಮಾನ್ಯ ಫೋರ್ಡೆಯವರು ಇದೇ ಸದನದಲ್ಲಿ ಹೇಳಿದ್ದಾರೆ, ಬೇಕಾದರೆ ರೆಕಾರ್ಡ್ ತೆಗೆದು ನೋಡಿ. ಹಿಂದೆ ನಿಮ್ಮದೇ ಸರ್ಕಾರ ಇತ್ತು. ಇವತ್ತು ಸಚಿವರು ಹೇಳಿರತಕ್ಕ ಆಶ್ವಾಸನೆಗೆ ವಿರುದ್ಧವಾಗಿ ಈ ತಿದ್ದುಪಡಿಯನ್ನು ತಂದಿದ್ದೀರಿ. ಈ ಮಾತು ಸಹ ರೆಕಾರ್ಡ್‌ಗೆ ಹೋಗಬೇಕು. ಮತ್ತು ಸತ್ಯಸಂಗತಿ ಬಯಲಿಗೆ ಬರಬೇಕೆಂಬ ದೃಷ್ಟಿಯಿಂದ ಆ ಒಂದು ಘಟನೆಯನ್ನು ತಮ್ಮ ಗಮನಕ್ಕೆ ತಂದೆ.

ಶ್ರೀ ಎಸ್. ಬಂಗಾರಪ್ಪ:– ಮಾನ್ಯ ಅಧ್ಯಕ್ಷರೇ ಈ ಸಂದರ್ಭದಲ್ಲಿ ತಮ್ಮ ಅಭಿಪ್ರಾಯಕ್ಕೆ ತಮ್ಮ ಅಣತಿಗೆ ಅನುಸರಿಸಿ ನಾವು ಸರ್ಕಾರದವರು ಅವರನ್ನು ಮಾತುಕತೆಗೆ ಕರೆಯುತ್ತೇವೆ ದಯಮಾಡಿ ನಾನು ತಮ್ಮ ಮುಖಾಂತರ ಮಾನ್ಯ ವಿರೋಧಪಕ್ಷದ ನಾಯಕರು ಮತ್ತು ಎಲ್ಲಾ ಸದಸ್ಯರು ನಾನು ಕೇಳುವುದೇನೆಂದರೆ, ಅವರೇನು ಬಾವಿಯಲ್ಲಿ ಕುಳಿತಿದ್ದಾರೆ, ನಾವು ವೆಲ್ ಎಂದು ಏನು ಕರೆಯುತ್ತೇವೆ ಆ ಬಾವಿಯಲ್ಲಿ ಅವರು ಕುಳಿತಿದ್ದಾರೆ. ನಿಜವಾಗಿ ಹೇಳಬೇಕೆಂದರೆ ಅವರು ಬಾವಿಯಲ್ಲಿ ಮುಳಗಬಾರದೆಂದು ನಮ್ಮ ಆಸೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:– ನಿಜ ಹೇಳಬೇಕೆಂದರೆ ಈಗ ಅವರು ಇನ್ನೂ ಮುಳುಗಿಲ್ಲ. ನೀವೇನಾದರು ಸುಳ್ಳು ಹೇಳಿದರೆ, ಅವರು ಮುಳುಗಿದರು ಎಂದು ಭಾವಿಸಬೇಕಾಗುತ್ತದೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:– ಅವರು ನೀರು ಇಲ್ಲದೆ ಇರುವ ಬಾವಿಯಲ್ಲಿ ಕುಳಿತಿದ್ದಾರೆ. ಇದು ಪಾಳು ಬಾವಿ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ:– ಆದ್ದರಿಂದ ಈ ವಿಚಾರದಲ್ಲಿ ಚರ್ಚೆ ಯಾವಾಗ ಆಗಬೇಕು ಏನು ಆಗಬೇಕು ಎನ್ನತಕ್ಕಂಥಾದ್ದು ಎಲ್ಲಾ ಕೂಡ ಬಿಜಿನಸ್ ಅಡ್ವೈಸರಿ ಕಮಿಟಿಯಲ್ಲಿ ತೀರ್ಮಾನ ಆಗಬೇಕು. ಅದರಲ್ಲಿ ತಾವು

ಇದ್ದೀರಿ, ತಾವು ಸಭೆ ಕರೆದು ಚರ್ಚೆ ಮಾಡತಕ್ಕಂಥ ವಿಚಾರವನ್ನು ತಮಗೇ ಬಿಡುತ್ತೇನೆ. ಆದರೆ ಈ ಸಂದರ್ಭದಲ್ಲಿ ಅವರು ಎದ್ದು ತಮ್ಮ ತಮ್ಮ ಸ್ಥಾನಗಳಿಗೆ ದಯಮಾಡಿ ವಿರೋಧಪಕ್ಷದ ನಾಯಕರಾದಿಯಾಗಿ ಹೋಗಿ ಕುಳಿತುಕೊಳ್ಳಬೇಕು. ಈ ದಿನದ ಮುಂದಿನ ವಿಷಯಗಳು ನಮ್ಮ ಅಜೆಂಡಾದಲ್ಲಿ ಏನು ಇವೆ, ಅವುಗಳನ್ನು ತಾವು ತೆಗೆದುಕೊಳ್ಳವುದಕ್ಕೆ ಅವರು ಅನುವು ಮಾಡಿಕೊಡಬೇಕೆಂದು ಸರ್ಕಾರದ ಪರವಾಗಿ ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಅಧ್ಯಕ್ಷರೇ ಈಗಾಗಲೇ ಕಾಲ 7 ಗಂಟೆ ಆಗುತ್ತಾ ಬಂದಿದೆ. ತಾವು ಯಾವಾಗಲೂ ಸದನವನ್ನು 6–30 ಗಂಟೆಗಳಿಗೆ ಮುಂದಕ್ಕೆ ಹಾಕುತ್ತಿದ್ದವರು. ಆದ್ದರಿಂದ ಇವತ್ತು ಸದನವನ್ನು ತಾವು ಮುಂದಕ್ಕೆ ಹಾಕಿ, ಈ ಸಮಸ್ಯೆ ಇನ್ನೂ ಬಗೆಹರಿದಿಲ್ಲ. ನಾಳೆ ಮಾನ್ಯ ಮುಖ್ಯಮಂತ್ರಿಗಳು ಮಾತುಕತೆಗೆ ಕರೆದಿವ್ದಾರೆ. ಆ ಮಾತುಕತೆ ನಾಳೆ ಯಾವ ನಿರ್ಧಾರಕ್ಕೆ ಬರುತ್ತದೆ ಎಂದು ನೋಡೋಣ. ಆದ್ದರಿಂದ ತಾವು ದಯಮಾಡಿ ಸಭೆಯನ್ನು ನಾಳೆಗೆ ಮುಂದೂಡಿ. ಇದರಿಂದ ನಾಳೆಯ ಮಾತುಕತೆಗೆ ಅನುಕೂಲವಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಸನ್ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಮಾತನಾಡತಕ್ಕಂಥ ಸಂದರ್ಭದಲ್ಲಿ ನಾನು ಒಂದು ವಿಶ್ವಾಸ ಇಟ್ಟುಕೊಂಡಿದ್ದೆ. ಬಹುಶಃ ಹಿಂದೆ ಇದ್ದಂತಹ ಇದೇ ಇಲಾಖೆ ಸಚಿವರು ಹೇಳಿದಂತಹ ಮಾತನ್ನು ನಾನು ಅವರ ಗಮನಕ್ಕೆ ತಂದ ಉದ್ದೇಶವಾದರೂ ಏನೆಂದರೆ, ಬಹುಶಃ ಬಸವಲಿಂಗಪ್ಪನವರಿಗೂ ಹಿಂದೆ ಇದ್ದಂತಹ ಅದೇ ಇಲಾಖೆ ಸಚಿವರಾಗಿದ್ದ ಶ್ರೀ ಎಂ.ವೈ. ಘೋರ್ಪಡೆಯವರ ಹೇಳಿಕೆಗೆ ಸಂಬಂಧಪಟ್ಟ ಹಾಗೆ ನಾನು ಅವರ ಗಮನಸೆಳೆಯಲು ಪ್ರಯತ್ನ ಪಟ್ಟೆ ಆದರೆ ಏನೂ ಪ್ರಯೋಜನವಾಗಲಿಲ್ಲ. ಆದ್ದರಿಂದ ಈಗಲಾದರೂ ಈ ಬಿಲ್ ವಾಪಸ್ಸ್ ತೆಗೆದುಕೊಂಡು ಮುಂದೆ ಒಂದು ಸಮಗ್ರವಾದ ಮಸೂದೆ ತರುತ್ತಾರೆಂದು ಭಾವಿಸಿದ್ದೆ. ಆ ಒಂದು ಧಾರಾಳತನವನ್ನು ಮಾನ್ಯ ಸಭಾನಾಯಕರು ಮಾಡದಿದ್ದರೆ ಈ ಒಂದು ಜಿಲ್ಲಾ ಪರಿಷತ್‌ಗೆ ತಂದಿರುವ ಕರಾಳ ಶಾಸನದ ತಿದ್ದುಪಡಿ ಏನಿದೆ ಇದನ್ನು ನಾವು ಪ್ರತಿಭಟನೆ ಮಾಡಿ ವಾಕ್ ಔಟ್ ಮಾಡುತ್ತಿದ್ದೇವೆ. ನಾವು ಈ ಸಭೆಯಿಂದ ಹೊರಗಡೆ ಹೋಗುತ್ತಿದ್ದೇವೆ.

(ಈ ಹಂತದಲ್ಲಿ ಬಿ.ಜೆ.ಪಿ. ಸದಸ್ಯರು ಸಭಾತ್ಯಾಗ ಮಾಡಿದರು)

ಶ್ರೀ ಎಸ್. ಬಂಗಾರಪ್ಪ:– ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಯಡಿಯೂರಪ್ಪನವರೇ ಸಲಹೆ ಕೊಟ್ಟರು. ಮಾತುಕತೆಗೆ ಕರೆಯಿರಿ ಎಂದು.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ:– ನೀವು ಹೊರಗಡೆ ಹೋಗತಕ್ಕಂಥ ಪ್ರಯಾಣಕ್ಕೆ ನಾವು ಅಡ್ಡ ಬರುವುದಿಲ್ಲ. ಈ ಸಂದರ್ಭದಲ್ಲಿ ಯಾವ ಬಿಲ್ ಅನ್ನು ನಾವು ಹಿಂದಕ್ಕೆ ತೆಗೆದುಕೊಳ್ಳಬೇಕು ಅನ್ನುವ ಅಭಿಪ್ರಾಯ ಹೇಳುತ್ತಿದ್ದಾರೆ, ಆ ಬಗ್ಗೆ ಕೂಡ ಸಾಧ್ಯತೆ ಇದೆ ಅಪಿಷಿಯಲ್ ಅಮೆಂಡ್‌ಮೆಂಟ್ಸ್ ಮೂವ್ ಮಾಡುವುದಕ್ಕೆ ಕಾನೂನು ಪ್ರಕಾರ ಅವಕಾಶ ಇರುತ್ತದೆ. ತಮ್ಮ ಒಂದು ಸಲಹೆ ಯೋಗ್ಯವಾಗಿ ಚರ್ಚೆ ಮಾಡುವ ಕಾಲದಲ್ಲಿ ಕಂಡು ಬಂದರೆ, ಆ ಒಂದು ವಿಚಾರಕ್ಕೂ ಆಸ್ಪದ ಇರುತ್ತದೆ. ಆದರೆ ಅವರು ಸುಮಾರಾಗಿ ಈ ಸಭೆಯಿಂದ ವಾಕೌಟ್ ಮಾಡಲು ಕಾರಣ ಇರಲಿಲ್ಲ. ಏಕೆಂದರೆ ಮಾತುಕತೆಗೆ ಅವರೇ ಸಲಹೆ ಮಾಡಿದ್ದರು. ಆದರಂತೆ ನಾವು ಮಾತುಕತೆಗೆ ಕರೆದಿದ್ದೇವೆ. ಮಾನ್ಯ ಅಧ್ಯಕ್ಷರ ಅಭಿಪ್ರಾಯಕ್ಕೆ ಅನುಸರಿಸಿ ನಾವು ಮಾತುಕತೆಗೆ ಸಿದ್ಧರಾಗಿದ್ದೇವೆ. ಸರ್ಕಾರದ ಒಂದು ಆಸೆ ಕೂಡ ಅದೇ ಇದೆ. ಆದರೂ ಸಭಾತ್ಯಾಗವನ್ನು ನಮ್ಮ ಬಿಜೆಪಿ ಮಿತ್ರರು ಮಾಡಿದರೆ ನಾವು ಒಂದು ಅಂತಿಮ ತೀರ್ಮಾನಕ್ಕೆ ಬರಬೇಕಾಗುತ್ತದೆ. ಇದು ಉದ್ದೇಶವೇ ಬೇರೆ, ನಿಜವಾಗಿಯೂ ಈ ಒಂದು ತಿದ್ದುಪಡಿ ಮಸೂದೆ ಬಗ್ಗೆ ಅವರು ಸೀರಿಯಸ್ ಆಗಿಲ್ಲ ಎನ್ನುವ ಒಂದು ಸ್ಪಷ್ಟವಾದ ಅಭಿಪ್ರಾಯ ನಮಗೆ ವೇದ್ಯವಾಗುತ್ತದೆ ಎಂದು ನಾವು ಅನಿವಾರ್ಯವಾಗಿ ಹೇಳಬೇಕಾಗುತ್ತದೆ. ದಯಮಾಡಿ ಅವರು ತಮ್ಮ ತಮ್ಮ ಸ್ಥಾನಗಳಿಗೆ ಹೋಗಬೇಕೆಂದು ನಾನು ಮತ್ತೋಮ್ಮೆ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಅಧ್ಯಕ್ಷರೇ ತಾವು ಈ ಸಭೆಯನ್ನು ಈಗ ಮುಂದಕ್ಕೆ

ದಯಾಮಾಡಿ ಹಾಕಿ. ಅವರು ನಾಳೆ ಮಾತುಕತೆಗೆ ಕರೆದಿದ್ದಾರೆ. ನಾಳೆ ಏನಾಗುತ್ತದೆಯೋ ನೋಡೋಣ ಈಗ ತಾವು ಸಭೆ ಮುಂದೂಡುವುದು ಸೂಕ್ತ ಮತ್ತು ಸಮಯೋಚಿತವಾದದು. ದಯಮಾಡಿ ಆ ಕೆಲಸ ತಾವು ಮಾಡಿ. ಈಗ ಸಭೆ ನಡೆಯತಕ್ಕಂಥಾದ್ದು ಸರಿಯಲ್ಲ.

ಶ್ರೀ ಗೋಪಾಲ ಮುಕುಂದ ಕಾನಡೆ :– ಮಾನ್ಯ ವಾಟಾಳ್‌ರವರಿಗೆ ಅಕ್ಕಪಕ್ಕದಲ್ಲಿ ಯಾರೂ ಇಲ್ಲ, ಅವರು ಬೇಗಹೋಗಬೇಕಾಗಿದೆ, ಅದಕ್ಕೆ ಸಭೆ ಮುಂದಕ್ಕೆ ಹಾಕಿ ಎಂದು ಹೇಳುತ್ತಿದ್ದಾರೆ.

ಶ್ರೀ ವಾಟಾಳ್‌ನಾಗರಾಜ್:– ಮಾನ್ಯ ಅಧ್ಯಕ್ಷರೇ, ಈ ಸಭೆಯ ನಡವಳಿಕೆಗಳನ್ನು ತಾವು ನೋಡಿ ಪ್ರತಿ ದಿವಸ ನಾನು ಬೆಳಿಗ್ಗೆ ಬಂದು ಸಾಯಂಕಾಲದವರೆಗೆ ಕುಳಿತುಕೊಂಡಿರುತ್ತೇನೆ. ಮಾನ್ಯ ಕಾನಡೆಯವರ ತರಹ ನಾನು ಅಲ್ಲಿ ಇಲ್ಲಿ ಓಡಾಡುವಂತಹ ಸದಸ್ಯ ಅಲ್ಲ, ನಾನು ಬೆಳಿಗ್ಗೆ ಇಲ್ಲಿ ಬಂದು ಕುಳಿತುಕೊಂಡರೆ ಸಾಯಂಕಾಲ ತಾವು ಬಿಡುವ ತನಕ ಇಲ್ಲಿಯೇ ಕುಳಿತುಕೊಂಡಿರುತ್ತೇನೆ.

ಶ್ರೀ ಗೋಪಾಲ ಮುಕುಂದ ಕಾನಡೆ:– ನೀವು ಇರುವವರೇ ಒಬ್ಬರು, ಅದಕ್ಕೆ ಕುಳಿತುಕೊಳ್ಳಬೇಕು ನಾವು ನೂರು ಚಿಲ್ಲರೆ ಜನ ಇದ್ದೇವೆ; ಅದಕ್ಕೇ ನಾವು ಅಲ್ಲಿ ಇಲ್ಲಿ ತಿರುಗಾಡುತ್ತೇವೆ.

ಶ್ರೀ ಸಿ.ಬೈರೇಗೌಡ:– ಇವತ್ತು ಸರ್ಕಾರ ಮೊದಲು ಇದ್ದ ನಿಲುವುನಲ್ಲಿ ಸ್ವಲ್ಪ ಬದಲಾವಣೆಯನ್ನು ನಾವು ಕಾಣುತ್ತಿದ್ದೇವೆ.

ಅಧ್ಯಕ್ಷರೇ : ಬದಲಾವಣೆಯೋ ಅಥವಾ ಸುಧಾರಣೆಯೋ

ಶ್ರೀ ಸಿ. ಬೈರೇಗೌಡ:– ಬದಲಾವಣೆ ಅಥವಾ ಸುಧಾರಣೆ ನಾವು ಕಾಣುತ್ತಿದ್ದೇವೆ. ಆ ದೃಷ್ಟಿಯಿಂದ ನಾಳೆ ನಾವು ಒಂದು ಕಡೆ ಕುಳಿತುಕೊಂಡು ಮಾತನಾಡುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕಾಗಿದೆ. ಆದ್ದರಿಂದ ಸಭೆಯನ್ನು ಈ ಹಂತದಲ್ಲಿ ಮುಂದುವರಿಸಿದರೆ ನಾಳೆ ದಿವಸ ನಾವೆಲ್ಲ ಒಂದು ಮಧುರವಾದ ವಾತಾವರಣದಲ್ಲಿ ಕುಳಿತು ಚರ್ಚೆ ಮಾಡಲು ಅವಕಾಶವಾಗುತ್ತದೆ. ಈಗಾಗಲೇ 7 ಗಂಟೆ ಆಗುತ್ತಿದೆ. ಆದ್ದರಿಂದ ಸದನವನ್ನು ಮುಂದೂಡಬೇಕೆಂದು ವಿನಂತಿಸುತ್ತೇನೆ. ದಯವಿಟ್ಟು ತಾವು ಆ ಕೆಲಸ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್:– ನಾನೂ ಸಹಾ ಇದನ್ನೇ ಹೇಳುತ್ತಿದ್ದೇನೆ. ದಯಮಾಡಿ ಸಭೆಯನ್ನು ಮುಂದಕ್ಕೆ ಹಾಕಬೇಕೆಂದು ಕೇಳುತ್ತಿದ್ದೇನೆ.

ಅಧ್ಯಕ್ಷರು: ಈಗ ಸದನದ ಕೆಲವು ಹಿರಿಯ ಅನುಭವಿ ಸದಸ್ಯರುಗಳ ಸಲಹೆ ಮೇರೆಗೆ ನಾನು ಸರ್ಕಾರಕ್ಕೆ ಮತ್ತು ಸಭಾನಾಯಕರಿಗೆ, ವಿರೋಧ ಪಕ್ಷದ ನಾಯಕರುಗಳನ್ನು ಮಾತುಕತೆಗೆ ಆಹ್ವಾನಾ ಮಾಡಿ ಎಂದು ನಾನು ಏನು ಸಲಹೆ ಕೊಟ್ಟೆ ಆ ಸಲಹೆಗೆ ಅವರು ಸಹಮತವನ್ನು ವ್ಯಕ್ತಪಡಿಸಿ ನಾಳೆ ದಿನ ಮಾನ್ಯ ವಿರೋಧ ಪಕ್ಷದ ನಾಯಕರನ್ನು ಮತ್ತು ಅವರ ಮಿತ್ರ ಪಕ್ಷದ ನಾಯಕರುಗಳನ್ನು ಮಾತುಕತೆಗೆ ಕರೆಯತ್ತೇನೆಂದು ಈಗ ನಮ್ಮ ಮುಂದೆ ಹೇಳಿದ್ದಾರೆ ಆ ಹೇಳಿಕೆಯ ಆಧಾರದ ಮೇಲೆ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಅವರ ಸಹ ಸದಸ್ಯರುಗಳು ತಮ್ಮ ತಮ್ಮ ಸ್ಥಾನಗಳಿಗೆ ಬಂದು ಕುಳಿತುಕೊಳ್ಳಬೇಕೆಂದು ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ (ವೆಲ್‌ನಲ್ಲಿ ನಿಂತು ಕೊಂಡು) ಈ ಧರಣಿ ಮಾಡಿದ ಸಮಯದಲ್ಲಿ ಸಭಾನಾಯಕರು ಇರಲಿಲ್ಲ.

ಅಧ್ಯಕ್ಷರು:– ಮಾನ್ಯ ವಾಟಾಳ್‌ನಾಗರಾಜ್ ಅವರೇ, ಈಗ ನೀವು ಏನು ಸಲಹೆ ಕೊಟ್ಟಿದ್ದೀರಿ, ಆ ಸಲಹೆಯನ್ನು ನಾನು...

ಶ್ರೀ ವಾಟಾಳ್ ನಾಗರಾಜ್:– ಈಗ 7 ಗಂಟೆಯಾಗುತ್ತಿದೆ. ಸಭೆಯನ್ನು ಮುಂದಕ್ಕೆ ಹಾಕಿದರೆ ಪರಿಸ್ಥಿತಿಗೆ ಒಂದು ದಾರಿಯಾಗುತ್ತದೆ. ತಮ್ಮ ಸಲಹೆಯನ್ನು ನಾನು ಒಪ್ಪುತ್ತೇನೆ. ತಾವೇ ಈ ಬಗ್ಗೆ ಮುಖಂಡತ್ವ

ವಹಿಸಿದ್ದೀರಿ ಬಹಳ ಸಂತೋಷ. ಈಗ ತಿಳಿ ವಾತಾವರಣ ಬರಬೇಕಾದರೆ ಸಭೆಯನ್ನು ಮುಂದಕ್ಕೆ ಹಾಕಬೇಕು ಆಗ ಪರಿಸ್ಥಿತಿ ಅನುಕೂಲವಾಗುತ್ತದೆಂದು ನನಗನಿಸುತ್ತದೆ.

ಶ್ರೀ ಸಿ. ಬೈರೇಗೌಡ:– ಮಾನ್ಯ ಅಧ್ಯಕ್ಷರೆ, ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದ ಹಾಗೆ, ಸದನವನ್ನು ಮುಂದಕ್ಕೆ ಹಾಕುವುದು ಒಳ್ಳೆಯದು. ಈಗಾಗಲೇ ಮಾನ್ಯ ಮುಖ್ಯ ಮಂತ್ರಿಯವರು ತಮ್ಮ ಮೊದಲ ನಿಲುವನ್ನು ಬದಲಾಯಿಸಿ ಸ್ವಲ್ಪ ಮಾರ್ಪಾಡು ಮಾಡಿಕೊಂಡಿದ್ದಾರೆ. ಬಹಳ ಸಂತೋಷ. ಈಗ 7 ಗಂಟೆ ಆಗುತ್ತಿದೆ; ಆದ್ದರಿಂದ ಸಭೆಯನ್ನು ಮುಂದಕ್ಕೆ ಹಾಕಿದರೆ ಒಳ್ಳೆಯದು. ನಾಳೆ ಬೆಳಿಗ್ಗೆ 10 ಗಂಟೆಗೆ ನಾವೆಲ್ಲಾ ಕೂತು ಮಾತನಾಡುವವರಿದ್ದೇವೆ. ಆಗ ನಾವು ಅವರ ಮನಸ್ಸನ್ನು ಒಲಿಸಿಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ಆದ್ದರಿಂದ ಈಗ ಸಭೆಯನ್ನು ನಾಳೆಗೆ ಮುಂದುವರಿಸಿದರೆ ಎಲ್ಲವನ್ನೂ ಬಗೆಹರಿಸತಕ್ಕಂಥ ಒಂದು ವಾತಾವರಣ ನಿರ್ಮಾಣವಾಗುತ್ತದೆಂದು ನಾನು ಹೇಳುತ್ತೇನೆ. ಆದ್ದರಿಂದ ದಯವಿಟ್ಟು ತಾವು ಆ ಕೆಲಸ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ:– ಮಾನ್ಯ ಅಧ್ಯಕ್ಷರೇ, ಒಂದೇ ಒಂದು ವಿಚಾರ. ಈ ಒಂದು ಸದನದಿಂದ ಬಂದಂಥ ಸಲಹೆಗೆ ತಾವು ಒಪ್ಪಿ ಒಂದು ಸಲಹೆ ನೀಡಿದಿರಿ. ಈ ಸಲಹೆಗೆ ಮನ್ನಣೆ ಕೊಟ್ಟು ವಿರೋಧ ಪಕ್ಷದ ನಾಯಕರು ಮತ್ತು ಸದಸ್ಯರುಗಳು ಏನಿದ್ದಾರೆ, ಅವರು ಅದಕ್ಕೆ ಒಪ್ಪಿದರೆ ಅದು ಸಾಧುವಾಗುತ್ತದೆ. ಆದಕ್ಕೇ ನಾನು ಮನವಿ ಮಾಡಿಕೊಳ್ಳುತ್ತೇನೆ. ಮಾನ್ಯ ಅಧ್ಯಕ್ಷರು ಮಾಡಿರುವ ಸಲಹೆಗೆ ಮಾನ್ಯ ವಿರೋಧ ಪಕ್ಷದ ನಾಯಕರು ಸಮ್ಮತಿ ಕೊಟ್ಟರೆ ನಿಮ್ಮ ಜೊತೆ ನಾಳೆ ದಿವಸ ಚರ್ಚೆ ಮಾಡುವುದಕ್ಕೆ ನಾವು ತಯಾರಾಗಿದ್ದೇವೆ. ನಾಳೆ 3 ಗಂಟೆಗೆ ಸಭೆ ಕರೆಯುತ್ತೇವೆ. ತಾವು ದಯಮಾಡಿ ಸಂತೋಷದಿಂದ ಇಲ್ಲಿಂದ ಏಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕರಿಯಣ್ಣ:– ಮಾನ್ಯ ಅಧ್ಯಕ್ಷರೇ, ಮಾನ್ಯ ಬೈರೇಗೌಡರು ಮತ್ತು ಮಾನ್ಯ ವಾಟಾಳ್ ನಾಗರಾಜ್‌ರವರು ಮಾಡಿರುವ ಸಲಹೆಯನ್ನು ನಮ್ಮ ನಾಯಕರು ಒಪ್ಪಿಕೊಂಡಿದ್ದಾರೆ. ಆದ್ದರಿಂದ ವಿರೋಧ ಪಕ್ಷದ ಸದಸ್ಯರುಗಳು ಅವರವರ ಸ್ಥಾನಗಳಿಗೆ ಹೋಗಿ ಕುಳಿತುಕೊಂಡು ಮಾತನಾಡಬಹುದು. ತಾವು ಮಾಡಿರುವ ಸಲಹೆ ಸೂಕ್ತವಾಗಿದೆ. ಅವರು ದಯವಿಟ್ಟು ಅವರವರ ಸ್ಥಾನಗಳಿಗೆ ಹೋಗಿ ಈಗ ಕುಳಿತುಕೊಳ್ಳಬೇಕು. ನಾಳೆ ದಿವಸ ತಮ್ಮ ಚೇಂಬರ್‌ನಲ್ಲಿ ಎಲ್ಲರೂ ಕುಳಿತು ಚರ್ಚೆ ಮಾಡುವುದು ಒಳ್ಳೆಯದೆಂದು ನನ್ನ ಅಭಿಲಾಷೆ. ಎಲ್ಲರೂ ಹಿರಿಯರಿದ್ದಾರೆ. ವಿರೋಧ ಪಕ್ಷದ ನಾಯಕರು ಇದನ್ನು ಒಪ್ಪಿಕೊಳ್ಳಬೇಕು. ಮಾನ್ಯ ಅಧ್ಯಕ್ಷರೇ, ಮಾನ್ಯ ವಾಟಾಳ್‌ನಾಗರಾಜ್‌ರವರು ಬೇಳೆಯನ್ನು ಕಳೆಯುವುದಕ್ಕಾಗಿ ಇದನ್ನು ಮುಂದಕ್ಕೆ ಹಾಕಬೇಕೆಂದು ಹೇಳುತ್ತಿದ್ದಾರೆ. ಆದ್ದರಿಂದ ...

ಅಧ್ಯಕ್ಷರು:– ಮಾನ್ಯ ವಾಟಾಳ್ ನಾಗರಾಜ್‌ರವರು ಮತ್ತು ಮಾನ್ಯ ಕರಿಯಣ್ಣನವರಿಬ್ಬರೂ ಕೊಟ್ಟಿರುವ ಸಲಹೆ ಸದುದ್ದೇಶದ್ದೇ ಆಗಿದೆ. ಈಗ ಹಿಂಡಸಗೇರಿ ಅವರು ಏನು ಹೇಳುತ್ತಾರೆಂದು ಕೇಳೋಣ.

7–00 ಪಿ..ಎಂ.

ಶ್ರೀ ಎ.ಎಂ. ಹಿಂಡಸಗೇರಿ:– ತಾವು ಏನು ಸಲಹೆ ಕೊಟ್ಟಿದ್ದೀರಿ, ಅದು ಬಹಳ ಸೂಕ್ತವಾಗಿದೆ. ನಾವು ನಿಮ್ಮ ಮುಖಾಂತರ ವಿರೋಧಿ ಪಕ್ಷದ ನಾಯಕರನ್ನು ಕೇಳಿಕೊಳ್ಳುತ್ತಾ ಇದ್ದೇವೆ, ಅವರು ತಮ್ಮ ಸ್ಥಾನಗಳಿಗೆ ಹೋಗಲಿ ಎಂದು. ಏಕೆಂದರೆ ತಾವು ಕೊಟ್ಟ ಸಲಹೆ ಬಹಳ ಸೂಕ್ತವಾಗಿದೆ ಎಂದು ನಾನು ಸಹ ಹೇಳುವುದಕ್ಕೆ ಬಯಸುತ್ತೇನೆ.

ಅಧ್ಯಕ್ಷರು:– ಮತ್ತೊಮ್ಮೆ ಮಾನ್ಯ ವಿರೋಧಿ ಪಕ್ಷದ ನಾಯಕರಲ್ಲಿ ವಿನಂತಿಸುತ್ತೇನೆ. ಹಿಂದಿನಮಂತ್ರಿಮಂಡಲದಲ್ಲಿ ಹಿರಿಯ ಸಚಿವರಾಗಿದ್ದ ಮಾನ್ಯ ಜಾಲಪ್ಪನವರು ಇದ್ದಾರೆ, ಮಾನ್ಯ ಸಿಂಧ್ಯಾರವರು ಇದ್ದಾರೆ, ಶ್ರೀಮಾನ್ ದೇಶಪಾಂಡೆಯವರು ಇದ್ದಾರೆ, ಅವರೆಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ ಕುಳಿತುಕೊಂಡರೆ ನಾವು ಸಭೆಯನ್ನು ಅಡ್‌ಜರ್ನ್ ಮಾಡುವಾಗಲಾದರೂ ಕೂಡ ಈ ಸದನ ಒಂದು, ಆರ್ಡರ್‌ನಲ್ಲಿತ್ತು ಎನ್ನತಕ್ಕ ಒಂದು ಮೆಸೇಜ್ ಈ ರಾಜ್ಯದ ಜನತೆಗೆ ಹೋಗಲಿ ಎಂದು ನನ್ನ ಇಚ್ಛೆ. ಆ ದೃಷ್ಟಿಯಿಂದ

ನಾನು ನಿಮ್ಮನ್ನು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನೀವು ಹೇಳಿದ ಎಲ್ಲವಕ್ಕೂ ಕೂಡ ಸಮ್ಮತವನ್ನು ಆಗಿಂದಾಗ್ಗೆ ವ್ಯಕ್ತಪಡಿಸುತ್ತಲೇ ಬಂದಿದ್ದೇವೆ. ಆದ್ದರಿಂದ ನೀವು ಏನು ಪಾಯಿಂಟ್ ಅನ್ನು ರಿಜಿಸ್ಟರ್ ಮಾಡಬೇಕು ಎಂದು ಇತ್ತು, ಆ ಪಾಯಿಂಟ್ ರಿಜಿಸ್ಟರ್ ಆಗಿದೆ. ಆದ್ದರಿಂದ ಇನ್ನು ಉಳಿದಿದ್ದು ಏನು ಎಂಬ ವಿಚಾರ ನನಗೆ ಅರ್ಥ ಆಗುವುದಿಲ್ಲ. ಆದ್ದರಿಂದ ಮಾನ್ಯ ಸದಸ್ಯರುಗಳು ಅವರವರ ಸ್ಥಾನಗಳಿಗೆ ಬಂದರೆ ಒಳ್ಳೆಯದು, ದಯವಿಟ್ಟು ನನ್ನ ಮಾತಿಗೆ ತಾವು ಓಗೊಡಬೇಕು. ಶ್ರೀಮಾನ್ ಏಕಾಂತಯ್ಯನವರು ನಮ್ಮ ಪಿಎಸಿಯ ಛೇರ್ಮನ್ ಆಗಿದ್ದಾರೆ. ಆದ್ದರಿಂದ ತಾವು ದಯವಿಟ್ಟು ತಮ್ಮ ತಮ್ಮ ಸ್ಥಾನಗಳಿಗೆ ಬಂದರೆ.

ಶ್ರೀ ಡಿ.ಬಿ. ಚಂದ್ರೇಗೌಡ:– ಚರ್ಚೆಗೆ ತಮ್ಮ ಸಲಹೆಗೆ ನನ್ನ ಸಂಪೂರ್ಣ ಒಪ್ಪಿಗೆ ಇದೆ. ಆದರೆ ಚರ್ಚೆಯ ಫಲಶೃತಿ ಆದ ಮೇಲೆ ನಾವು ನಮ್ಮ ನಿರ್ಣಯವನ್ನು ಏನು ಮಾಡಬೇಕು ಎಂಬ ಬಗ್ಗೆ ನಿರ್ಧಾರ ತೆಗೆದು ಕೊಳ್ಳುತ್ತೇವೆ. ಬೆಳಿಗ್ಗೆ ಈ ಮಾತಿನ ಪ್ರಾರಂಭಿಕ ಪ್ರಸ್ತಾಪ ಆಯಿತು. ಆಗ ಮಾನ್ಯ ಸಭಾ ನಾಯಕರು ಇರಲಿಲ್ಲ. ಆ ಹೊತ್ತಿಗೆ ಆ ಮಾತು ಆಗಲಿಲ್ಲ. ಆದ್ದರಿಂದ ಈಗ ತಮ್ಮ ಸಲಹೆಯನ್ನು ನಾನು ಮಾನ್ಯ ಮಾಡುತ್ತೇವೆ ಆದರೆ ಇವೊತ್ತು ಆ ವಿಚಾರದಲ್ಲಿ ನಾವು ಹಿಂದೆ ಸರಿಯುವಂತಹ ಸ್ಥಿತಿಯಲ್ಲಿಲ್ಲ.

(ಗೊಂದಲ)

ಶ್ರೀ ಬಿ. ಸ್ವಾಮಿರಾವ್:– ಮಾನ್ಯ ಸಭಾಧ್ಯಕ್ಷರೇ, ಮಾನ್ಯ ವಿರೋಧಿ ಪಕ್ಷದ ನಾಯಕರು ತಮ್ಮ ಸ್ಥಾನದಲ್ಲಿ ಕುಳಿತಿದ್ದವರು. ಅವರು ಅನುಭವಸ್ಥರೂ ಆಗಿದ್ದಾರೆ. ಅವರೂ ಕೂಡ ಇಂತಹ ಅನೇಕ ಸಂದರ್ಭದಲ್ಲಿ ಅನೇಕ ತೀರ್ಪುಗಳನ್ನು ಕೊಟ್ಟಿದ್ದಾರೆ. ಇಂದೆ ಎಂದೂ ಕೊಡದೆ ಇರತಕ್ಕಂಥ ತೀರ್ಮಾನವನ್ನು ತಾವು ಕೊಟ್ಟಿದ್ದೀರಿ. ಹಿಂದೆ ಎಂದೂ ಮಾಡದೆ ಇರತಕ್ಕ ಕಾರ್ಯಕ್ರಮಗಳನ್ನು ಈ ಸಂದರ್ಭದಲ್ಲಿ ಅವರು ಮಾಡುತ್ತಿದ್ದಾರೆ. ಆದ್ದರಿಂದ ದಯವಿಟ್ಟು ಈ ಸದನದ ಗೌರವವನ್ನು ಕಾಪಾಡಬೇಕು. ಇದು ಸರಿಯಲ್ಲ, ಅವರು ತಮ್ಮ ತಮ್ಮ ಸ್ಥಾನಗಳಿಗೆ ಹೋಗಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್:– ಗೌರವಕ್ಕಾಗಿಯೇ ಅವರು ಕುಳಿತುಕೊಂಡಿದ್ದಾರೆ.

ಅಧ್ಯಕ್ಷರು:– ಈಗ ಸದನವನ್ನು ನಾಳೆ 11 ಗಂಟೆಗೆ ಮುಂದುವರಿಸುತ್ತೇನೆ. ಸದನ ನಾಳೆ 11 ಗಂಟೆಗೆ ಮತ್ತೆ ಸೇರುತ್ತದೆ.

(ಸದನವು) 7 ಗಂಟೆಗೆ 5 ನಿಮಿಷಕ್ಕೆ ಮುಕ್ತಾಯವಾಗಿ, ಪುನಃ 28ನೇ ನವೆಂಬರ್ ಮಾಹೆ 1990ನೇ ಬುಧವಾರದಂದು 11 ಗಂಟೆಗೆ ಸೇರಲು ನಿಶ್ಚಯಿಸಿತು)

(+ ಈ ಚೆನ್ಹೆ ಮಾನ್ಯ ಸದಸ್ಯರ ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)